ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ
Chilume Circulated in and around 10 countries

ಸಂಪುಟ ೨, ಸಂಚಿಕೆ ೩, ಆಗಸ್ಟ್ ೨೦೧೪

ಸ್ವತಂತ್ರ ಚಿಲುಮೆಯ ಮನವಿರಲಿ

ಗೌರೀ ಗಣೇಶ ಹಬ್ಬದ ಶುಭಾಶಯಗಳು

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧
ಮಾಸ್ಟರ್ ಮಾತು ... ಪು. ೨
ಅಕಾರಾಂತ ಕಥೆ ... ಪು. ೪

ಚಿಲುಮೆಯ ಒಳಗೆ

ಆರೋಗ್ಯ ... ಪು. ೬
ವಿಚಾರ-ವಿಹಾರ ... ಪು. ೮
ರಾಂ ರಾಮ! ಹಾಸ್ಯ ... ಪು. ೯

ಚಿಲುಮೆಯ ಒಳಗೆ

ಹುಬ್ಬಳ್ಳಿ ಜಂಕ್ಷನ್! ... ಪು. ೧೧
ಕಥಾಚಿಲುಮೆ, ರೆಸಿಪಿ ಕೊಡ್ತೀರಾ! ... ಪು. ೧೨
ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೩

ಚಿಲುಮೆಯ ಒಳಗೆ

ವಿಶ್ಲೇಷಣೆ ... ಪು. ೧೪
ಪದ ಪುಂಜ ... ಪು. ೧೫
ರಂಗೋಲಿ ... ಪು. ೧೫

ಚಿಲುಮೆಯ ಒಳಗೆ

e-ಮದುವೆ(ಹಾಸ್ಯ) ... ಪು. ೧೬
ವಿಜ್ಞಾನ ... ಪು. ೧೭
ಅಲ್ಲಲ್ಲಿ ಏನೇನು ... ಪು. ೧೭

ಚಿಲುಮೆಯ ಒಳಗೆ

ಉತ್ತರ ಕರ್ನಾಟಕ ಭಾಷೆಯ "ಹುಬ್ಬಳ್ಳಿ ಜಂಕ್ಷನ್" ಪುಟ ೧೧ ರಲ್ಲಿ

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಆಗಸ್ಟ್ ತಿಂಗಳು ಬಂದರೆ ಶ್ರಾವಣದ ಹಬ್ಬದ ಸಾಲಿಗಿಂತ ಮೊದಲು ನೆನಪು ಬರುವುದು ಭಾರತ ದೇಶದ ಸ್ವಾತಂತ್ರ್ಯ ದಿನವಾದ ಆಗಸ್ಟ್ ೧೫. ದೇಶವು ಮತ್ತೊಬ್ಬರ ಹಿಡಿತದಲ್ಲಿತ್ತು. ಅಂತಹ ಸ್ಥಿತಿಯಿಂದ ಅದಕ್ಕೆ ಮುಕ್ತಿ ಸಿಕ್ಕಿದ ದಿನವೆಂದು ನಾವುಗಳೆಲ್ಲ ಹೆಮ್ಮೆಯಿಂದ ಹೇಳುವ ಈ ದಿವಸವು, ದೇಶದ ಬಗ್ಗೆ ಅಭಿಮಾನವಿಟ್ಟವರೆಲ್ಲರಲ್ಲೂ ಒಂದು ಬಗೆಯ ರೋಮಾಂಚನ ತರಿಸುತ್ತದೆ. ನಿಜ, ಅದು ಭಾವಕ್ಕೆ ಪುಟಿದೇಳುವ ಪ್ರತಿಕ್ರಿಯೆ. ಅದು ಸಹಜವೂ ಕೂಡ. ದಬ್ಬಾಳಿಕೆಯ ವಿರುದ್ಧ ಹೋರಾಡಿದ ಮಹನೀಯರನ್ನು ನೆನೆಸಿಕೊಳ್ಳುವಂತೆ ಮಾಡುವ ಒಂದು ಸುದಿನವದು. ಓದುಗರೆಲ್ಲರಿಗೂ ಸ್ವಾತಂತ್ರ್ಯ ದಿನದ ಶುಭ ಆಶಯಗಳನ್ನು ಚಿಲುಮೆಯ ಬಳಗದ ಪರವಾಗಿ ಕೋರುತ್ತಿದ್ದೀವಿ.

ಈ ಸ್ವಾತಂತ್ರ್ಯ ಅನ್ನೋ ಪದ ಅದೆಷ್ಟು ಉಲ್ಲಾಸ ತರಿಸುತ್ತದೆ ಅಲ್ಲವೇ? ಮುಕ್ತತೆಗೆ ಅಷ್ಟು ಉತ್ಸಾಹ ತುಂಬುವ ಶಕ್ತಿಯಂತೂ ಇದೆ. ಹಾಗಾದರೆ ಸ್ವತಂತ್ರ ರಾಷ್ಟ್ರವೆನಿಸಿಕೊಂಡಿರುವ ಎಲ್ಲ ರಾಷ್ಟ್ರಗಳಲ್ಲಿ ನಿಜಕ್ಕೂ ಮುಕ್ತ ವಾತಾವರಣವಿದೆಯೇ. ಅದು ಒಂದು ದೊಡ್ಡ ಚರ್ಚೆಯ ವಿಷಯವೇ ಸರಿ. "ಯಾರಿಗೆ ಬಂತು ಎಲ್ಲಿಗೆ ಬಂತು ನಲವತ್ತೇಳರ ಸ್ವಾತಂತ್ರ್ಯ ..." ಎಂದು ಕವಿಯೋರ್ವರು ಪ್ರಶ್ನಿಸುವಾಗ, ನಮ್ಮ ನಿಮ್ಮೆಲ್ಲರ ಮನದಲ್ಲಿ ವಿಶ್ಲೇಷಣೆ ಶುರುವಾಗಬಹುದು. ಸಮಾಜಮುಖಿ ವ್ಯವಸ್ಥೆ ಪ್ರಚಲಿತದಲ್ಲಿದೆಯೇ. ಇಲ್ಲದಿದ್ದರೆ ನಾಗರೀಕ ಸಮಾಜದ ವ್ಯಕ್ತಿಯಾಗಿ ಅದನ್ನು ತರಲು ವಯ್ಯಕ್ತಿಕವಾಗಿ ಪ್ರತಿಯೊಬ್ಬರೂ ಏನು ಮಾಡಬಹುದು? ಇತ್ಯಾದಿ. ಅಂತಹ ಒಂದು ಚಿಂತನೆ ನಾವು ಸ್ವತಂತ್ರವಾಗಿ ಯೋಚಿಸುತ್ತಿರುವುದಕ್ಕೆ ಪ್ರಮಾಣವಾಗುತ್ತದೆ.

ನಾವು ಬೆಳೆದ, ಬೆಳಸಿಕೊಂಡ, ಪ್ರೇರಿತಗೊಂಡ ಚಿಂತನೆಗಳ ಪ್ರಭಾವದಿಂದ ನಾವೆಲ್ಲರೂ ಒಂದು ಚೌಕಟ್ಟಿನೊಳಗೆ ನೋಡುವುದು ಸಹಜ. ಒಂದು ಚಿತ್ರಪಟದಲ್ಲಿ ಒಂದು ಪರಿಮಿತಿ ಮಾತ್ರ ಹೇಗೆ ಅಡಕಗೊಳ್ಳುತ್ತದೆಯೋ. ಹಾಗೆ ನಮ್ಮ ದೃಷ್ಟಿಕೋನದಿಂದ ಮಾತ್ರವೇ ಎಲ್ಲವನ್ನು ಅಳೆದರೆ ಜಗತ್ತು ಹಾಗೆಯೇ ಕಾಣಿಸುತ್ತದೆ. ಇದು ಸರಿ ತಪ್ಪು ಎಂದು ವಿಶ್ಲೇಷಿಸುವ ಅಗತ್ಯಕ್ಕಿಂತ ಆ ಚೌಕಟ್ಟಿನ ಬಂಧನದಿಂದ ಹೊರ ಇಣುಕಿ, ಬಹುವಿಧದ ಚಿಂತನೆಯನ್ನು ಅಳವಡಿಸಿಕೊಳ್ಳುವ ಸ್ವಾತಂತ್ರ್ಯವನ್ನು ನಮ್ಮ ಮನಸಿಗೆ ಕೊಟ್ಟು, ಏಕರೂಪಿ ಚಿಂತನೆಗಳ ಕಟ್ಟುನಿಟ್ಟಿನಿಂದ ಹೊರಬರುವುದು ಒಳಿತಲ್ಲವೇ?

ಈ ಸಂಚಿಕೆಯಲ್ಲಿ ಶ್ರೀ ರಾಮನಾಥ್ ಅವರ ಹಾಸ್ಯಬರಹದಲ್ಲಿ ಸ್ವಾತಂತ್ರ್ಯದ ನಾನಾ ಮುಖಗಳ ಅನಾವರಣವಾಗಿದೆ. ಮಾಸ್ಟರ್ ಮಾತಿನಲ್ಲಿ ಹಿರಣ್ಣಯ್ಯನವರು ದಿ|| ಎ. ಎಸ್. ಮೂರ್ತಿ ಅವರ ಬಗ್ಗೆ ತಿಳಿಸಿಕೊಟ್ಟಿದ್ದಾರೆ. ಬೇಲೂರು ರಾಮಮೂರ್ತಿಯವರ "ಅ"ಕಾರಂತ ಕಥೆಯಲ್ಲಿ ಪ್ರತೀ ಸಾಲು, ಕನ್ನಡ ವರ್ಣಮಾಲೆಯ ಅಕ್ಷರದಿಂದ ಬರುವಂತೆ ವಿಶಿಷ್ಟವಾಗಿ ಹೆಣೆದಿದ್ದಾರೆ. ಸ್ಮಿತಾ ಮೇಲ್ಕೋಟೆಯವರಂತೂ ಮದುವೆ ಮನೆಗೆ ಕರೆದುಕೊಂಡು ಹೋಗಿ ನಗುವನ್ನು ಬಡಿಸಿದ್ದಾರೆ. ಮತ್ತೊಂದು ವಿಶೇಷ! ಈ ಸಂಚಿಕೆಯಲ್ಲಿ ಉತ್ತರ ಕರ್ನಾಟಕ ಭಾಷೆಯ ಒಂದು ಪುಟ್ಟ ಅಂಕಣ "ಹುಬ್ಬಳ್ಳಿ ಜಂಕ್ಷನ್" ಎಂಬ ಹೆಸರಿನಿಂದ ಪ್ರಾರಂಭಗೊಳ್ಳುತ್ತಿದೆ. ಬಸವರಾಜು ಅವರ ಈ ಲೇಖನಕ್ಕೆ ಪ್ರೋತ್ಸಾಹ ಕೊಡುವಿರೆಂಬ ನಂಬಿಕೆ ಇದೆ.

ಏಳು ಸ್ವರವು ಸೇರಿ ಸಂಗೀತವಾಯಿತು ಎನ್ನುವಂತೆ, ಬಗೆ ಬಗೆಯ ಸಂಸ್ಕೃತಿಯ ದರ್ಶನ ನಮಗಾಗಲಿ ಎಂದು ಆಶಿಸೋಣ. ಎಲ್ಲದ್ದರಲ್ಲಿ ಒಳ್ಳೆಯದನ್ನು ಆರಿಸುವ ಸ್ವಾತಂತ್ರ್ಯವನ್ನು ನಮ್ಮದಾಗಿಸಿಕೊಂಡು, ಈ ಜೀವನವನ್ನು ಹಬ್ಬವಾಗಿ ಆಚರಿಸೋಣವಲ್ಲವೇ! ▪

ಕೇಳೋಣ

ಅಮೃತ ಘಳಿಗೆ ಚಿತ್ರದ "ಹಿಂದುಸ್ತಾನವು ..." ಹಾಡು ಕೇಳಲು ಮೇಲಿನ ಚಿತ್ರವನ್ನು ಕ್ಲಿಕ್ ಮಾಡಿ

(Click picture to view)

ಮುಂದಿರುವ ತಿಂಗಳ ಪ್ರಮುಖ ದಿನಗಳು ಪುಟ ೫ ರಲ್ಲಿ ...

ಗಣಪತಿ ಹಬ್ಬಕ್ಕೊಂದು ಜನಪ್ರಿಯ ಹಾಡು ಕೇಳಲು ಚಿತ್ರ ಕ್ಲಿಕ್ ಮಾಡಿ

(Click picture to view)

ನೋಡೋಣ

ನಿಮ್ಮ ಕಥೆ, ಕವನ, ಸಲಹೆ ಇತ್ಯಾದಿ ನಮಗೆ ಕಳುಹಿಸಿ. ನಮ್ಮ ಇ-ಮೇಲ್ – HORANADACHILUME@GMAIL.COM

ಮಾಸ್ಟರ್ ಮಾತು

ಮಾಸ್ಟರ್ ಹಿರಣ್ಣಯ್ಯ

ಲಂಚಾವತಾರ ಖ್ಯಾತಿಯ ಹಿರಿಯ ರಂಗಭೂಮಿ ಕಲಾವಿದರು

ನಾ ಕಂಡಂತೆ ಶ್ರೀ ಎ.ಎಸ್.ಮೂರ್ತಿಗಳು

ಬಹು ಮುಖ ಪ್ರತಿಭೆಯ ಮೂರ್ತಿಗಳನ್ನು ಕುರಿತು ಬರೆಯಲು ಅಸದಳ ಎಂಬ ಸತ್ಯ ಅರಿವಿದ್ದೇ ನಾನು ಈ "ನಾ ಕಂಡಂತೆ" ಎಂಬ ತಲೆ ಬರಹವನ್ನು ಇಟ್ಟೇ ಆರಂಭಿಸಿರುವುದು. ಇಷ್ಟು ವರ್ಷಗಳು ಅವರ ಸಂಗದಲ್ಲಿದ್ದೇ ನನಗೆ ಅವರನ್ನು ಇಷ್ಟು ಮಾತ್ರ ತಿಳಿದು ಕೊಳ್ಳಲು ಸಾಧ್ಯವಾಯ್ತು. ಜೊತೆಗೆ ಅವರೊಡನೆ ಬೆರೆಯುವ, ಒಡನಾಡುವ, ಭಾಗವಹಿಸುವ ಕೆಲವೇ ಅವಕಾಶಗಳು ಸಿಕ್ಕಿದ್ದರಲ್ಲಿ, ನನ್ನೀ ಪರಿಚಯ ಲೇಖನಕ್ಕೆ ಒದಗಿದಷ್ಟನ್ನು ಮಾತ್ರಾ ಉಲ್ಲೇಖಿಸುವ ಸಾಹಸ ಮಾಡಿದ್ದೇನೆ.

ನನ್ನ ಅವರ ಪ್ರಥಮ ಭೇಟಿಯ ಕಾಲವನ್ನಾಗಲೀ, ಸಂದರ್ಭವನ್ನಾಗಲೀ, ಇದಮಿತ್ಥಂ ಎಂದು ಹೇಳಲಾರೆ. ಆದರೆ ಇಷ್ಟಂತೂ ನಿಜ. ಆ ಭೇಟಿಗೆ ಮುಂಚಿತವಾಗಿಯೇ ಉಭಯರೂ ಒಬ್ಬರ ಬಗ್ಗೆ ಒಬ್ಬರು ಸಾಕಷ್ಟು ತಿಳಿದು, ಎಂದು ಭೇಟಿಯಾದೇವೋ ಎಂಬಷ್ಟು ಕಾತುರ-ಆತುರ-ಮಾತ್ರಾ ಉಭಯತ್ರರಲ್ಲೂ ಬಲ್ತಿತ್ತು. ಆ ಕಾರಣದಿಂದಾಗೇ ನಮ್ಮ ಮೊದಲ ಭೇಟಿಯೇ ನಮ್ಮ ಮೈತ್ರಿಯನ್ನು ಶಾಶ್ವತವಾಗಿ ಬೆಸೆದು ಬಿಟ್ಟಿತು. ಇಂಗ್ಲೀಷನಲ್ಲಿ ಒಂದು ಗಾದೆ ಮಾತಿನಂತೆ-"Birds of same Feather Flock together when they meet each other" ಎಂಬಂತೆ.



ಸಮಾಜ ನನ್ನಲ್ಲಿ ಕಂಡಿರುವ ಕೆಲವು ಗುಣ-ಧ್ಯೇಯಗಳನ್ನು, ನಾನು ಮೂರ್ತಿಯವರಲ್ಲಿ ಗುರುತಿಸಿದ್ದೇನೆ. ಅದೇ ಕಾರಣಕ್ಕೇ ನಮ್ಮ ಬೆಸುಗೆ ಇರಬೇಕು. ನೇರ ನುಡಿ, ಬಿಚ್ಚು ಮಾತು, ಕೆಲವೊಮ್ಮೆ ಚುಚ್ಚು ಮಾತೂ ಸಹ. ಆ ಮಾತು ಚುಚ್ಚಾದರೂ, ನೋವಾಗದಂಥ ನುಡಿಗಟ್ಟು. ನೇರ ನುಡಿಯೂ ಹಾಗೇ, ಬಿಚ್ಚು ಮಾತೂ ಅಷ್ಟೆ. ಎಲ್ಲವೂ ಕಾಯಾ-ವಾಚಾ-ಮನಸಾ ಎಂಬಂತೆ, ಮೂಡಿದ್ದನ್ನೇ ಆಡುವುದು, ಆಡಿದನ್ನೇ ನಡೆಯುವುದು. ಇವೆಲ್ಲವೂ ನಮ್ಮಿಬ್ಬರ ಸಮಾನ ಕೃಯೆ-ಪ್ರಕೃಯೆ. ಅದರ ಭೂಮಿಕೆಯೂ ಸಹ ಒಂದೇ. ಅದು ರಂಗಭೂಮಿಯೇ ಇರಲಿ, ಆಕಾಶವಾಣಿಯೇ ಆಗಿರಲಿ, ಕಿರು-ಹಿರಿತೆರೆಗಳೇ ಆಗಲೀ, ಧ್ವನಿ ಸುರುಳಿಯೇ ಆಗಲೀ, ಬರವಣಿಗೆಯಲ್ಲೇ ಆಗಲೀ-ಎಲ್ಲದರಲ್ಲೂ ಸಾಮಾಜಿಕ ಕಳಕಳಿ-ರಾಜಕೀಯ ಶುದ್ಧೀಕರಣ, ಧರ್ಮದ ರುವಾರಿಯಾದ "ಕಾವಿ"ಯ ಕೊಳೆ ತೊಳೆಯುವುದು, ಇವನ್ನೇ ಪರಮಾದರ್ಶವಾಗುಳ್ಳ ಮೂರ್ತಿಗಳನ್ನು ನನ್ನ ಅಂತರಂಗದ ಪೂಜಾರಿಯನ್ನಾಗಿಸಿಕೊಳ್ಳಲು ನನಗೆ ಬಹಳ ಸಮಯ ಬೇಕಾಗಲಿಲ್ಲ. ಅಲ್ಲಿನ ಕಲಾಮಾತೆಗೆ ಸೂಕ್ತ ಪೂಜಾರಿ ಎನ್ನಿಸಿತು. ನಾ ಭಕ್ತ ಮಾತ್ರ.

ಸನ್ಮಿತ್ರ ದಿ| ಕಣಗಾಲ್ ಪುಟ್ಟಣ್ಣನ "ಕಾನ್ಸ್ಟೇಬಲ್ ಕಸ್ತೂರಿ" ಚಲನ ಚಿತ್ರದ ಚಿತ್ರೀಕರಣದಲ್ಲಿ, ನಮ್ಮಿಬ್ಬರ ಭೇಟಿಯಾದಾಗ, ನಮ್ಮ ನಮ್ಮ ಪಾತ್ರಗಳಲ್ಲಿ ನಾವು ತಲ್ಲೀನರಾಗಿದ್ದುದನ್ನು ಕಂಡು ಪುಟ್ಟಣ್ಣ ನಮ್ಮಿಬ್ಬರನ್ನೂ ಜನ್ಮ ಜನ್ಮಂತರದ ಏಕದೇಹಿಗಳು ಎಂದದ್ದು ಖಂಡಿತಾ ಉತ್ಪ್ರೇಕ್ಷೆಯಲ್ಲ.

ಆಕಾಶವಾಣಿಯಲ್ಲಿ ತಮ್ಮ"ಸತ್ಯ"ಕ್ಕಾದ ಅಪಚಾರ-ಅವಮಾನಗಳ ವಿರುದ್ಧ ಸಿಡಿದೆದ್ದು, ಕಾನೂನು ಸಮರ ಹೂಡಿ ಗೆದ್ದ ಮೂರ್ತಿಗಳನ್ನು, ಇಂದು ಸಾಮಾಜಿಕ ಕಳಕಳಿಯನ್ನು ಹೊತ್ತ ಸರ್ವರೂ ಆದರ್ಶವಾಗಿಟ್ಟು ಕೊಳ್ಳಬೇಕು.

ಆಗ ಧ್ವನಿಸುರುಳಿಗಳಲ್ಲಿ ನಾಟಕಗಳು ಹೊರಹೊಮ್ಮಿ, ಒಂದು ಪರಿಣಾಮಕಾರಿ ಕ್ರಾಂತಿಯನ್ನೇ ಎಬ್ಬಿಸಿದ್ದ ಕಾಲ. ಮೂರ್ತಿಗಳ ಮತ್ತು ನನ್ನ ನಾಟಕಗಳ ಬಹು ಬೇಡಿಕೆಯ ಕಾಲ ಅದಾಗಿತ್ತು. ಆಗೊಮ್ಮೆ ಭೇಟಿಯಾದ ಮೂರ್ತಿಗಳು, "ನಾವಿಬ್ಬರೂ ಸೇರಿಕೊಂಡು ಒಂದು ನಾಟಕವನ್ನು ಕೊಟ್ಟರೆ ಹೇಗೆ?" ಎಂಬ ಚಿಂತನೆಯನ್ನು ಮುಂದಿಟ್ಟರು. ಹೂಂ ಎಂದದ್ದೇ ತಡ-ಕೂಡಲೇ ಕಾರ್ಯಪ್ರವರ್ತರಾಗಿ ಬರೆದು ತಂದೇ ಬಿಟ್ಟರು ಕೃತಿಯೊಂದನ್ನು. ಆಗ ನಾವಿಬ್ಬರೂ ಕೂಡಿ ಮಾಡಿ ಬಿಟ್ಟದ್ದೇ "ಕಪ್ಪೇ ಮೂತಿ ಮಠಾವತಾರ" ಶಬ್ಧಸುರಳಿ. ಕಪಟ ಕಾವೀಧಾರಿಗಳ ಮರ್ಮ-ಅಂಥವರನ್ನು ಮೂಡನಂಬಿಕೆಯಿಂದ ಓಲೈಸುತ್ತಿರುವ ಅಸಂಖ್ಯಾತ ಭಕ್ತರ ಕರ್ಮ-ಅಂಥವರ ಕೈಲಿ ಸಿಕ್ಕಿ ನಲುಗುತ್ತಿರುವ, ಅನ್ಯರು ನಗುತ್ತಿರುವ ನಮ್ಮ ಪ್ರಾಚೀನ ಪವಿತ್ರ ಧರ್ಮ, ಇವುಗಳನ್ನು ಅವಕುಂಠನಗೊಳಿಸಿ, ಪರಿಹಾರವನ್ನೂ ಸೂಚಿಸುವಂಥಾ ಆ ನಾಟಕ ಎಲ್ಲರ ಮನೆ-ಮನಗಳನ್ನು ಸೇರಿ ಶಾಶ್ವತ ಸ್ಥಾನ ಪಡೆಯಿತು.

ಮುಂದಿನ ಪುಟ ನೋಡಿ ...

ಸಾಂಪ್ರದಾಯಕ ರಂಗಭೂಮಿಗೇ ಸೀಮಿತವಾಗಿದ್ದ ನನ್ನ ತಲೆಗೆ ಒಂದು ಬಗೆಯ "ಬೀದಿ ನಾಟಕ" ಸ್ವರೂಪದ ಗಣೇಶೋತ್ಸವ, ರಾಜ್ಯೋತ್ಸವಗಳ ಪ್ರಯೋಗದ ಕಲ್ಪನೆ ತುಂಬಿ, ಎಲ್ಲೆಲ್ಲೂ-ಎಲ್ಲರೂ ನಿಂತು ನೋಡಿ-ಕೇಳುವಂತಾಗಬೇಕು ನಿಮ್ಮ ಈ ಕ್ರಾಂತಿಕಾರಿ ನಾಟಕಗಳು ಎಂಬ ಮಂತ್ರೋಪದೇಶದಿಂದ, ನಾಲ್ಕು ಗೋಡೆಯೊಳಗಿದ್ದ ನನ್ನನ್ನು ಬೀದಿ ವೃತ್ತಗಳಿಗೆ ಎಳೆತಂದ ಕೀರ್ತಿ ಮೂರ್ತಿಯವರಿಗೇ ಸಲ್ಲಬೇಕು. ಕಾರಣ ಅಂದು ಆ ಕ್ರಮವನ್ನು ನಾನು ನಿರಾಕರಿಸಿದ್ದಿದ್ದರೆ ಇಂದಿನ ಈ "ಗ್ರಹಣಗ್ರಸ್ತ" ವೃತ್ತಿ ರಂಗಭೂಮಿಯ ಸುಳಿಗೆ ಸಿಕ್ಕಿ ನಮ್ಮ ಮಿತ್ರ ಮಂಡಲಿಯು ಎಂದೋ ಅಸ್ತಂಗತವಾಗಿ ಹೋಗಿ ಬಿಡುತ್ತಿತ್ತು.

ಮೂರ್ತಿಯವರಲ್ಲಿ ನಾನು ಗಮನಿಸಿದ ಮತ್ತೊಂದು ಮುಖ್ಯಾಂಶವೆಂದರೆ, ತಮ್ಮ ಕುಟುಂಬವನ್ನೇ ಕಲಾರಾಧನೆಗೆ ತೊಡಗಿಸಿರುವುದಲ್ಲದೇ, ಪ್ರತಿಭೆಗಳನ್ನು ಗುರುತಿಸಿ, ಕರೆತಂದು ಸಾಕಷ್ಟು ತರಬೇತಿ ನೀಡಿ, ರಂಗಕಲಾಕುಲ ಸಂಪತ್ತನ್ನೇ ಶ್ರೀಮಂತ ಗೊಳಿಸುತ್ತಿದ್ದಾರೆ. ಅರ್ಧ ಶತಮಾನದಿಂದ "ಕಲಾಮಂದಿರ"ದ ರುವಾರಿಯಾಗಿ, ತಂದೆಯವರು ನಡೆದು ತೋರಿದ ಹಾದಿಯಲ್ಲೇ ಅಡಿಯಿಡುತ್ತಾ, ನಾನಾ ಕಲಾ ಪ್ರಾಕಾರಗಳನ್ನು ಹೊರತೆಗೆದು, ಅನೇಕ ಸಂಘ-ಸಂಸ್ಥೆಗಳನ್ನು ಹುಟ್ಟುಹಾಕಿ, ಪಿತೃಋಣ-ಕಲಾಋಣ ಹಾಗೂ ಸಮಾಜದ ಋಣವನ್ನು ತೀರಿಸುವಲ್ಲಿ ಅಗ್ರಮಾನ್ಯರೆನಿಸಿದ್ದಾರೆ.

ಮಾಧ್ಯಮಗಳ ಮತ್ತೊಂದು ಮುಖ್ಯ ಮುಖವಾದ "ಪತ್ರಿಕೋದ್ಯಮ"ದಲ್ಲೂ ಸಹ ಮೂರ್ತಿಯವರದ್ದು ಮೇಲುಗೈ. ನಾನು ಭಾಗವಹಿಸಿರುವ ಅನೇಕ ಚಲನಚಿತ್ರ-ರಂಗಭೂಮಿ-ಕಿರುತೆರೆಗಳ ಪತ್ರಿಕಾ ಸಮಾವೇಶ, ಸಂದರ್ಶನಗಳಲ್ಲಿ, ಮೂರ್ತಿಯವರು ತಮ್ಮ ಪ್ರಶ್ನೆಗಳ ಮೂಲಕ ಹೆಕ್ಕಿ ತೆಗೆಯುವ ಉತ್ತರಗಳು, ಚರ್ಚೆಗೆಳೆದು ಹೊರಹಾಕುವ ವಿಚಾರಗಳು, ಆ ವೈಖರಿ ಇವೆಲ್ಲವನ್ನೂ ಅನುಭವಿಸಿಯೇ ಆನಂದಿಸ ಬೇಕು. ಮಾತಿಗೆಳೆದು ಚಿಂತನೆಗೆ ಈಡುಮಾಡುವ ಅವರ ಕಲೆ ಅತ್ಯದ್ಭುತ.

ಇನ್ನು "ಬೀದೀನಾಟಕ"ಗಳಿಗೆ ಶ್ರೀಯುತರು ನೀಡಿರುವ ತಿರುವು ಸ್ಮರಣಾರ್ಹ. ಆರೋಗ್ಯ ಸಮಸ್ಯೆ ಯಿಂದ ಹಿಡಿದು, ಶಿಕ್ಷಣ-ಜನಸಂಖ್ಯಾ ಸ್ಫೋಟ-ಗ್ರಾಮಾಂತರಗಳನ್ನು ಕಾಡುತ್ತಿರುವ ರಾಜಕೀಯ ಸಮಸ್ಯೆಗಳು..ಹೀಗೆ ಅವರು ಮುಟ್ಟದ ಪ್ರಾಕಾರಗಳಿಲ್ಲ-ಕಥೆ ಕಟ್ಟಿ ಆಡದ ಪ್ರಾಂಗಣಗಳಿಲ್ಲ. ಎಲ್ಲಕ್ಕೂ ತಿಳಿಹಾಸ್ಯ-ವಿಡಂಬನಾ ರಸ ಸಿಂಚನ. ಕೇಳುಗರಿಗೆ ರಸರಂಜನೆ-ವಿಚಾರ ವಿಕಾಸಗಳನ್ನು ಏಕಕಾಲದಲ್ಲಿ ನೀಡುವ ಅಪ್ರತಿಮ ಸಾಧನೆ ಅವರದ್ದು. ಸಮಾಜ ಸೇವೆ ಮಾಡಿದ ಆತ್ಮತೃಪ್ತಿ ಅವರಿಗೆ-ಪ್ರದರ್ಶನ ಕಲೆಯ ಸಂಪೂರ್ಣ ಸಾರ್ಥಕತೆಯ ಸಾಕ್ಷಾತ್ಕಾರ ನಮಗೆ.

ಇಷ್ಟೆಲ್ಲಾ "ಸದ್ಗುಣಗಳ ಗಣಿ" ಮೂರ್ತಿಗಳು ಎಂದಾಗ, ಲೋಪ-ದೋಷ ರಹಿತರೇ ಅವರು ಎಂಬ ಪ್ರಶ್ನೆ ಹುಟ್ಟುವುದು ಸಹಜ. ಅನ್ಯರ ಅಸಹನೆ-ಅಸೂಯೆಗಳ ಬಾಯಿ ತೆವಲಿಗಾಗಿಯೇ, ನಿರ್ವಿಕಾರವಾಗಿ-ನಿರ್ದೋಶನಾಗಿ-ಮಗುವಾಗಿ ಹುಟ್ಟುವ ಪ್ರತಿ ಮಾನವನೂ, ತಾನು ಬೆಳೆದಂತೆಲ್ಲಾ ಒಂದಲ್ಲಾ ಒಂದು-ಕೆಲವೊಮ್ಮೆ ಹಲವಾರು, ಲೋಪಗಳನ್ನು ಮೈಗೂಡಿಸಿಯೇ ಕೊಳ್ಳುತ್ತಾನೆ ಅಲ್ಲವೇ? ಅದಕ್ಕೆ ಯಾರು ತಾನೇ ಅಪವಾದ? ಅದರಂತೆ ನಮ್ಮ ಮೂರ್ತಿಗಳು ಇದ್ದರೆ ತಪ್ಪೇ? ಮನುಷ್ಯನೇ ಸೃಷ್ಟಿಸಿರುವ ದೇವದೇವನಲ್ಲೂ ಸಹ ಲೋಪ ದೋಷಗಳನ್ನು ಇಟ್ಟು ತೃಪ್ತಿ ಪಡುತ್ತಾನೆ ಈ ಮಾನವ. ಆದರೆ ನಾವು ಸೃಷ್ಟಿಯ ಸೌಂದರ್ಯವನ್ನು ಮಾತ್ರಾ ಸವಿಯಲಿಚ್ಛಿಸುವಂತೆ, ಕಪ್ಪು-ಕಡ್ಡಿಗಳನ್ನು ತೆಗೆದು ಮೃಷ್ಟಾನ್ನವನ್ನು ಮಾತ್ರಾ ಭುಂಜಿಸುವಂತೆ, ಸಾವು-ನೋವುಗಳನ್ನು ಮರೆತು ಬದುಕನ್ನು ಸಾಗಿಸುವಂತೆ, ಪ್ರತಿಯೊಬ್ಬರಲ್ಲಿನ ಗುಣಾವಗುಣಗಳಲ್ಲಿ ಸದ್ಗುಣಗಳನ್ನು ಮಾತ್ರ ಗ್ರಹಿಸಿ ಗೌರವಿಸಿದರೇ ಆತ್ಮತೃಪ್ತಿ-ದೈವಪ್ರೀತಿ ಅದೇ ನಿಜ ಮಾನವನ ರೀತಿ. ಗ್ರಾಹ್ಯಾಗ್ರಾಹ್ಯಗಳ ರೀತಿ ರಿವಾಜುಗಳೂ ಅದೇ ಅಲ್ಲವೇ? ತಪ್ಪುಗಳನ್ನೇ ಹುಡುಕುವವನು, ಮರಳುಗಾಡಿನಲ್ಲಿ ನೆರಳು ಅರಸುವವನಂತಾಗಿ, ಈ ಲೋಕದಲ್ಲಿ ಪ್ರೀತಿಸಲು ಯಾರೂ ಸಿಗದಂತೆ ಅನಾಥನಾಗಿಬಿಡುತ್ತಾನೆ. ಇದು ಕಾರಣ ಒಬ್ಬ, ಈ ಲೋಕಕ್ಕೆ ಎಷ್ಟು ಉಪಕಾರಿ, ಸಮಾಜ ಸೇವಾ ಕಾರ್ಯಕ್ಕೆ ಎಂಥಾ ರುವಾರಿ, ತಾನು ಪಡೆದ ಸಕಲ ಶಕ್ತಿಗಳ ಮೂಲ ರೂಪವಾದ ಮಾನವ ಕುಲಕ್ಕೆ ಅದೆಷ್ಟು ಆಭಾರಿ, ಎಂದಷ್ಟೇ ಅಳೆದು-ತಿಳಿದು ನೋಡಿದಲ್ಲಿ ನಮ್ಮ ಮೂರ್ತಿಗಳು ನಿಜಕ್ಕೂ ಧನ್ಯ. "ಸತ್ತಂತೆ ಬದುಕಿರುವವರ ಪಟ್ಟಿಯನ್ನು ಬಿಟ್ಟು, ಸತ್ತ ಮೇಲೂ ಬದುಕಿರುವವರ" ಪಟ್ಟಿಯನ್ನು ಬದುಕಿರುವಾಗಲೇ ಸೇರಿರುವ ಶ್ರೀಮೂರ್ತಿಯವರು "ಶತಮಾನಂಭವತಿ ಶತಾಯುಃಪುರುಷ ಶತೇಂದ್ರಿಯ ಆಯುಷ್ಯೇವೇಂದ್ರಿಯ ಪ್ರತಿತಿಷ್ಠತಿ".

ಶುಭಮಸ್ತು-ಶ್ರೇಯೋಸ್ತು.▪

ಲೇಖಕರು: ಬೇಲೂರು ರಾಮಮೂರ್ತಿ

ಅರವಿಂದನು ಒಂದು ದಿನ ಏಕಾಂತದಲ್ಲಿ ತನ್ಮಯನಾಗಿ ಕೂತಿದ್ದಾಗ ಮನದಲ್ಲಿ
ಆಶೀರ್ವಾದ ಸದಾ ಇರಬೇಕು ಸಾಧನೆಗೆ ಹಿರಿಯರ ಮತ್ತು ಭಗವಂತನ ಎನಿಸಿ
ಇಂಗು ತಿಂದ ಮಂಗನಂತಾಗಬಾರದು ಬದುಕಿನ ವಿವಿಧ ಹಂತಗಳಲ್ಲಿ ಎಂದರೆ
ಈಸಬೇಕು ಇದ್ದು ಜೈಸಬೇಕು ಎನ್ನೋ ಛಲ ತುಂಬಿಕೊಂಡಿರಬೇಕು ಮತ್ತು
ಉದ್ವೇಗಕ್ಕೊಳಗಾಗದೇ ಸಹನಶೀಲತೆಯನ್ನು ರೂಢಿಸಿಕೊಂಡು ತಾ ಹುಟ್ಟಿದ
ಊರಿಗೆ ಮನೆಗೆ ಒಳ್ಳೆ ಹೆಸರು ತಂದುಕೊಡುವಂತೆ ಬದುಕಿ ಭೂಮಿತಾಯಿಗೆ
ಋಣಮುಕ್ತನಾಗಿರಬೇಕು ಎನ್ನುವ ಧ್ಯೇಯದ ವಾಕ್ಯವು ಮನದಲ್ಲಿ ಮೊಳಗಿತು
ಎನಗಿಂತ ಕಿರಿಯರಿಲ್ಲ ಅಂತ ಹಿರಿಯರೊಬ್ಬರು ತಿಳಿ ಹೇಳಿದ್ದು ನೆನಪಾಗಿ ನನಗೆ
ಏಳೇಳು ಜನ್ಮಕ್ಕೂ ನನಗೆ ಸದಾ ವಿನಯವೇ ಭೂಷಣವಾಗಿರಲಿ ಎಂದು ಬಯಸಿ
ಐಕ್ಯಮತ್ಯವಿರಬೇಕು ನಾನು ಕೈ ಹಿಡಿಯುವ ಹೆಣ್ಣಿನ ಜೊತೆ ಅಂದುಕೊಂಡು
ಒಂಟಿ ಜೀವನ ಸಾಕು ಸಾಕೆನಿಸಿ ಸಂಸಾರ ಸುಖ ಬೇಕೆನಿಸಿ ಮದುವೆಯಾಗಿ
ಓಹೋ ಅಲ್ಲದಿದ್ದರೂ ಆಹಾ ಎನ್ನುವಂತೆ ಹೆಂಡತಿಯೊಂದಿಗೆ ಸಂಸಾರ ಸಾಗಿಸಿ
ಔಷಧಿ ಮಾತ್ರೆಗಳಿಂದ ದೂರವಿದ್ದು, ಆದಷ್ಟೂ ಆರೋಗ್ಯವನ್ನು ಕಾಪಾಡಿಕೊಂಡು
ಅಂತಕರಣದಿಂದ ನೆರೆಹೊರೆಯವರಿಗೆ ಅಷ್ಟೋ ಇಷ್ಟೋ ಸಹಾಯ ಮಾಡುತ್ತಾ:
ಅಃ (ಆಹಾ) ಏನು ಸುಂದರ ಈ ಬದುಕು ಅಂತ ಆನಂದದಿಂದ ಬದುಕು ಸಾಗಿಸಿದ

ಕಲ್ಲರಳಿ ಹೂವಾಗುವಂತೆ ಮನವರಳಿ ಬಾಳಾಗಬೇಕು ಸಮಾಜದಲ್ಲಿ ಅನಿಸಿದಾಗ
ಖಂಡಿತವಾದಿ ಲೋಕವಿರೋಧಿ ಎನ್ನುವ ಮಾತಿನ ತಿರುಳಂತೆ ಆಡುವ ಮಾತಿನಲ್ಲಿ
ಗಮನವಿರಬೇಕು, ನಮ್ಮ ನಡೆನುಡಿಗಳಲ್ಲಿ ಆಚರಣೆ ತಪ್ಪಬಾರದು, ಇವನೊಬ್ಬ
ಘಟಾನುಘಟಿ ಅಂತ ಹೊಗಳಿದವರ ಮುಂದೆ ಯಾವುದೇ ವಿಷಯದಲ್ಲೂ ಅ
ಜ್ಞ ನಾಗದೇ ಜ್ಞಾನಿಯಾಗುವ ಹಸಿವನ್ನು ಮೈಗೂಡಿಸಿಕೊಳ್ಳೋ ಗುರಿ ಮೂಡಿತು

ಚಂದದ ಹೆಂಡತಿ ಚಂದನದಂಥವಳು, ಮನೆ ಮನ ತುಂಬಿ ಘನತೆ ಹೆಚ್ಚಿಸಿದವಳು
ಛಲೋ ಸುಂದರ ಹುಡುಗಿ , ಪತಿಯನ್ನು ಅರ್ಥ ಮಾಡಿಕೊಂಡು ಬಾಳುತ್ತಾ
ಜಗಳವೆಂದರೆ ಏನೆಂದೇ ಅರಿಯದವಳಂತೆ ಬರೀ ಪ್ರೀತಿಯನ್ನೇ ಧಾರೆಯದಾಗ
ಝಂಝಾಟದ ಬದುಕಿನಲ್ಲಿ ಸುಖಕ್ಕೆ ಕೊರತೆಯೇ ಇರಲಿಲ್ಲ ಅರವಿಂದನಿಗೆ

ಟಪಾಲಿನಲ್ಲಿ ಬರುವ ಕಾಗದಗಳು ಅನುಬಂಧ ತರೋದು ಈಗೀಗ ಅಪರೂಪ
ಠಕ್ಕಿನ ದಿನಗಳಲ್ಲಿ ಮೊಬೈಲು, ಮೆಸೇಜು, ಈಮೈಲ್ ಗಳೇ ಪ್ರಾಧಾನ್ಯವಾಗಿದ್ದು
ಡಂಗುರ ಹೊಡೆದು ಸಂಬಂಧ ಸಾರಬೇಕಾಗಿರುವ ಪರಿಸ್ಥಿತಿ ಉಂಟಾಗಿರುವಾಗ
ಢಕಲಾಯಿಸುವ ಮಂದಿಯೇ ನಮ್ಮ ಸುತ್ತ ಮುತ್ತ ಸೇರಿಕೊಂಡು ಮತ್ತವರಿಗೆ ಹ
ಣವೇ ಮುಖ್ಯವಾಗಿ ಸಂಬಂಧಗಳು ಅರ್ಥ ಕಳೆದುಕೊಳ್ಳುವ ಅಪಾಯ ಇದೆ ಎನಿಸಿತು.

ಮುಂದಿನ ಪುಟ ನೋಡಿ ...

ತಲೆ ತಾಪತ್ರಯಗಳ ಜಂಜಡದ ದಿನಗಳಿಂದ ಮುಕ್ತಿ ಇಲ್ಲ ಎಂಬುದು ನಿಜವಾದರೂ
ಥಕಧಿಮಿತ ಕುಣಿಯಲೇಬೇಕು ಸಂದರ್ಭಕ್ಕೆ ತಕ್ಕ ಹಾಗೆ, ಖಂಡಿತಾ ಬೇರೆ ದಾರಿ ಇಲ್ಲ
ದನಕನಕದ ಮೋಹಪಾಷದಲ್ಲಿ ಸಿಲುಕದವರೇ ಇಲ್ಲದಿರುವಾಗ, ನಮಗೆ ಖಂಡಿತಾ
ಧಮ್ ಇರಲೇಬೇಕು ಬರುವ ಸವಾಲುಗಳನ್ನು ಎದುರಿಸಿ ನಿಂತು ಗೆಲ್ಲಲುಅದಕ್ಕೇ .
ನಗು ಇದ್ದರೆ ಬದುಕಿನ ಸೊಬಗೇ ಸೊಬಗು ಅಂತ ನಗುಮಂತ್ರ ಅಳವಡಿಸಿಕೊಂಡ

ಪಕ್ಷಿ ಪ್ರಾಣಿಗಳನ್ನೂ ಸಹ ನೆಮ್ಮದಿಯಿಂದ ಬದುಕಲು ಬಿಡಬೇಕು ನಮ್ಮ ಜೊತೆಗೆ
ಫಲಬಿಡುವ ಮರಗಳನ್ನು ನೆಡಬೇಕು, ನೆಟ್ಟು ನೀರೆರೆದು ಆರೈಕೆ ಮಾಡುತ್ತಿರಬೇಕು
ಬರಡು ಭೂಮಿಯೇ ಇರದಂತೆ ಭೂದೇವಿಯ ಪಾಲನೆ ಪೋಷಣೆ ಮಾಡಿಕೊಂಡು
ಭವನ ಕಟ್ಟಿಸಿದರೂ ಸರಿ ಬಿಟ್ಟು ಹೋಗಲೇಬೇಕು ಎಂಬ ಸತ್ಯ ಅರಿತು ಬದುಕಬೇಕು
ಮಠ ಮಂದಿರಗಳಿಗೆ ಹೋಗುತ್ತಾ ಅಗೋಚರ ಶಕ್ತಿಯಲ್ಲಿ ನಂಬಿಕೆ ಇಟ್ಟುಕೊಂಡಿದ್ದ.

ಯಶ್ವಿನಿಯಲ್ಲ ಬದುಕಿನ ಯಶಸ್ಸು ಕಷ್ಟ ಪಡಬೇಕು ಅದಕ್ಕೆ ಎನ್ನುವ ನಿಜ ನೆನಪಾಗಿ
ರತ್ನದಂತೆ ಹೊಳೆಯುತ್ತಿರಬೇಕು ನಮ್ಮ ನಡವಳಿಕೆ ಶಕ್ತಿ ಉತ್ಸಾಹಗಳೊಂದಿಗೆ ಎನಿಸಿ
ಲವಲವಿಕೆಯ ಕ್ರಿಯಾಶೀಲತೆಯ ಜೊತೆಗೆ ಗುರಿಯೇ ಪ್ರಾಧಾನ್ಯವಾಗಿಟ್ಟುಕೊಂಡು
ವಕ್ರಬುದ್ಧಿ ಕಿಂಚಿತ್ ಕೂಡಾ ನಮ್ಮ ಸುತ್ತಮುತ್ತ ಸುಳಿಯದಂತೆ ನೋಡಿಕೊಂಡು
ಶಕ್ತಿಯೊಂದಿಗೆ ಯುಕ್ತಿಯನ್ನೂ ಉಪಯೋಗಿಸಿ ಜೀವನ ರಥದ ಗಾಲಿ ತಿರುಗಿಸಿದರೆ
ಷಡ್ಗುಣ ಸಂಪನ್ನನಿವನೆಂದು ನೆಂಟರು, ಸ್ನೇಹಿತರೂ ಮುಕ್ತ ಕಂಠದಿಂದ ಹೊಗಳಿದರೆ
ಸವಿನಯದಿಂದ ಅದನ್ನೊಪ್ಪಿಕೊಂಡಾಗ ಅರವಿಂದನಿಗೆ ಮುತ್ತಿನಂತಹ ಮಾತೊಂದು
ಹಣಕ್ಕಲ್ಲ ಪ್ರಾಧಾನ್ಯತೆ ಗುಣಕ್ಕೆ ಅಂತ ಅದನ್ನು ತನ್ನ ಬದುಕಿನಲ್ಲಿ ಅಳವಡಿಸಿಕೊಂಡ.▪

ಆಗಸ್ಟ್ - ಶ್ರೀ ಜಯನಾಮ ಸಂವತ್ಸರ, ದಕ್ಷಿಣಾಯನ,
ವರ್ಷ ಋತು, ಶ್ರಾವಣ/ಭಾದ್ರಪದ ಮಾಸ (AUGUST)

01 ಶು - ನಾಗಪಂಚಮಿ
07 ಗು - ಪವಿತ್ರಾ ಏಕಾದಶಿ
8 ಶು - ವರಮಹಾಲಕ್ಷ್ಮಿ ವ್ರತ
10 ಭಾ - ಹುಣ್ಣಿಮೆ/ರಕ್ಷಾ ಬಂಧನ/ಋಗ್ ಯಜುರ್ ಉಪಾಕರ್ಮ
13 ಬು - ಸಂಕಷ್ಟಹರ ಗಣಪತಿ ಪೂಜೆ
15 ಶು - ಭಾರತ ಸ್ವಾತಂತ್ರ್ಯ ದಿನಾಚರಣೆ
17 ಭಾ - ಶ್ರೀ ಕೃಷ್ಣ ಜನ್ಮಾಷ್ಟಮಿ
21 ಗು - ಸರ್ವತ್ರ ಏಕಾದಶಿ
24/25 - ಅಮಾವಾಸ್ಯೆ
26 ಮಂ - ಭಾದ್ರಪದ ಮಾಸ ಆರಂಭ
28 ಗು - ಸ್ವರ್ಣ ಗೌರಿ ವ್ರತ
29 ಶು - ಗಣೇಶ ಚತುರ್ಥಿ

ಮುಂದೆರಡು ತಿಂಗಳ ಪ್ರಮುಖ ದಿನಗಳು

ಸೆಪ್ಟೆಂಬರ್ ಶ್ರೀ ಜಯನಾಮ ಸಂವತ್ಸರ, ದಕ್ಷಿಣಾಯನ, ವರ್ಷ/ಶರದ್ ಋತು,
ಭಾದ್ರಪದ/ಆಶ್ವಯುಜ ಮಾಸ

05 ಶು - ಏಕಾದಶಿ
06 ಶ - ತಿರು ಓಣಂ
7 ಭಾ - ಅನಂತ ಪದ್ಮನಾಭವ್ರತ
09 ಮಂ - ಅನಂತನ ಹುಣ್ಣಿಮೆ
12 ಶು - ಸಂಕಷ್ಟಹರ ಗಣಪತಿ ಪೂಜೆ
15 ಸೋ - ಸರ್ ಎಂ ವಿಶ್ವೇಶ್ವರಯ್ಯ ಜನ್ಮ ದಿನ
19 ಶು - ಇಂದಿರಾ ಏಕಾದಶಿ
23/24 ಬು - ಮಹಾಲಯ ಅಮಾವಾಸ್ಯೆ
25 ಗು - ನವರಾತ್ರಿ/ಆಶ್ವಯುಜಮಾಸ ಆರಂಭ

ಬಕ್ ವೀಟ್ (Buckwheat)

ರಾಜಿ ಜಯದೇವ್ (Accredited Practising Dietician)
Mrs Raji Jayadev, B.Sc (Hons) Dip Nutr & Diet (Syd)

ಬಕ್ ವೀಟ್ - ಈ ಹೆಸರು ಕೇಳಿದೊಡನೆ ಇದು ಗೋಧಿಗೆ ಸಂಬಂದಿಸಿದ ಧಾನ್ಯ ಎನಿಸಬಹುದು. ಆದರೆ ಇದು ರುಬಾಬ್ (rhubarb) ಮತ್ತು ಸೊರೆಲ್ (sorrel) ಜಾತಿಗೆ ಸೇರಿದ ಸಸ್ಯ. ಅಕ್ಕಿ, ರಾಗಿ, ಗೋಧಿಗಳಂತೆ ಧಾನ್ಯವಲ್ಲವಾದರೂ ಇದನ್ನು ಉಪಯೋಗಿಸುವುದು ಇತರ ಧಾನ್ಯಗಳಂತೆ. ಸಸ್ಯಶಾಸ್ತ್ರೀಯವಾಗಿ ಇದನ್ನು ಫಾಗೋಪೈರಂ ಎಸ್ಕುಲೆಂಟಮ್ (Fagopyrum esculentum) ಎಂದು ಕರೆಯುತ್ತಾರೆ. ಹಿಂದಿ ಮತ್ತು ತಮಿಳಿನಲ್ಲಿ ಇದರ ಹೆಸರು ಕೂಟು ಅಥವಾ ಕುಟ್ಟು ಎಂದು. ಉತ್ತರ ಮತ್ತು ಪಶ್ಚಿಮ ಭಾರತದಲ್ಲಿ ಬಕ್ ವೀಟ್ ಹಿಟ್ಟಿನಿಂದ (ಕುಟ್ಟು ಕ ಅಟ್ಟ) ಪೂರಿ, ಪಕೋಡ ಮುಂತಾದ ಖಾದ್ಯ ಪದಾರ್ಥಗಳನ್ನು ತಯಾರಿಸುತ್ತಾರೆ. ಉಪವಾಸದ ದಿನಗಳಲ್ಲಿ (ಉದಾ: ಏಕಾದಶಿ, ಶಿವರಾತ್ರಿ) ಅಕ್ಕಿ ಮತ್ತು ಗೋಧಿಯಿಂದ ಮಾಡಿದ ಪದಾರ್ಥಗಳು ನಿಷಿದ್ಧವಾದ್ದರಿಂದ ಬಕ್ ವೀಟಿನಿಂದ ತಯಾರಿಸಿದ ಪದಾರ್ಥಗಳನ್ನು ಉಪಯೋಗಿಸುತ್ತಾರೆ.

ಅಕ್ಕಿ, ರಾಗಿ, ಗೋಧಿ ಮುಂತಾದ ಇತರ ಧಾನ್ಯಗಳಿಗೆ ಹೋಲಿಸಿದರೆ **ಬಕ್ ವೀಟ್ ಹೆಚ್ಚು ಪ್ರೋಟೀನನ್ನುಹೊಂದಿದೆ.** ಅಲ್ಲದೆ **ಪ್ರೋಟೀನಿನ ಗುಣಮಟ್ಟ ಉತ್ತಮ ದರ್ಜೆಯದಾಗಿದೆ.** ಸಾಮಾನ್ಯವಾಗಿ ಪ್ರೋಟೀನಿನ ಗುಣಮಟ್ಟ ಪ್ರಾಣಿಜನ್ಯ ಆಹಾರಗಳಲ್ಲಿ ಮಾತ್ರ ಉತ್ತಮ ದರ್ಜೆಯದಾಗಿರುತ್ತದೆ; ಸಸ್ಯಜನ್ಯ ಆಹಾರಗಳಲ್ಲಿ ಎರಡನೆಯ ದರ್ಜೆಯದಾಗಿರುತ್ತದೆ. ಆದರೆ ಬಕ್ ವೀಟ್, ಸೋಯಾಬೀನ್, ಕೀನ್-ವಾ ಮುಂತಾದ ಬೆರಳೆಣಿಕೆಯಷ್ಟು ಸಸ್ಯಜನ್ಯ ಆಹಾರಗಳು ಉತ್ತಮ ದರ್ಜೆಯ ಪ್ರೋಟೀನನ್ನು ಹೊಂದಿವೆ. ಹೊಟ್ಟು (dietary fibre), ದೇಹರಕ್ಷಕ antioxidant ಲಿಗ್ನನ್ ಮತ್ತು ರುಟಿನ್, ಹಲವಾರು ವಿಟಮಿನ್ಸ್ ಮತ್ತು ಮಿನರಲ್ಸ್ (ಉದಾ: copper, phosphorus, iron, magnesium) ಕೂಡ ಗಣನೀಯ ಪ್ರಮಾಣದಲ್ಲಿವೆ. ಗೋಧಿಯಲ್ಲಿರುವ gluten (ಒಂದು ಬಗೆಯ ಪ್ರೋಟೀನ್) ಬಕ್ ವೀಟಿನಲ್ಲಿ ಇರುವುದಿಲ್ಲ. ಆದ್ದರಿಂದ gluten ಅಲರ್ಜಿಯಿರುವವರು ಗೋಧಿಯ ಬದಲು ಬಕ್ ವೀಟನ್ನು ಉಪಯೋಗಿಸಬಹುದು.

ಕಡಿಮೆಮಟ್ಟದ Glycemic Index (50) ಹೊಂದಿರುವ ಬಕ್ ವೀಟ್, wholegrain ಆಹಾರಪದಾರ್ಥ. Wholegrain ಆಹಾರಪದಾರ್ಥಗಳು ನಮ್ಮ ಜೀರ್ಣಾಂಗಗಳನ್ನು ಸುಸ್ಥಿತಿಯಲ್ಲಿಡುತ್ತವೆ. ಡಯಾಬಿಟಿಸ್ ಮತ್ತು ಹೃದಯರೋಗಗಳನ್ನು ತಡೆಹಿಡಿಯುತ್ತವೆ. ಬಕ್ ವೀಟನ್ನು ಉಪಯೋಗಿಸುವುದರಿಂದ ರಕ್ತದಲ್ಲಿರುವ ಕೊಲೆಸ್ಟಿರಾಲ್ ಮತ್ತು ಸಕ್ಕರೆಯ ಪ್ರಮಾಣವನ್ನು ನಿಯಂತ್ರಣದಲ್ಲಿಡಬಹುದೆಂದು ಹಲವಾರು ಅಧ್ಯಯನಗಳಿಂದ ತಿಳಿದುಬಂದಿದೆ.

ಬಕ್ ವೀಟ್, ಅಕ್ಕಿ ಮತ್ತು ಗೋಧಿಯಲ್ಲಿರುವ ಪ್ರಮುಖ ಪೋಷಕಾಂಶಗಳ ಪಟ್ಟಿ.

ಆಹಾರ ಪದಾರ್ಥ - 100 ಗ್ರಾಂ	ಅಕ್ಕಿ	ಗೋಧಿ	ಬಕ್ ವೀಟ್
Energy - ಶಕ್ತಿ (ಕ್ಯಾಲೋರಿ)	340	330	343
Protein – ಸಸಾರಜನಕ (ಗ್ರಾಂ)	**6.6**	**12**	**13.2**
Carbohydrate - ಶರ್ಕರಪಿಷ್ಟ (ಗ್ರಾಂ)	80	70	71.5
Fat - ಕೊಬ್ಬು (ಗ್ರಾಂ)	0.5	1.54	3.4 (ಒಮೀಗಾ 3 ಒಳಗೊಂಡಿದೆ)
Dietary fibre - ಹೊಟ್ಟು (ಗ್ರಾಂ)	2.3	11	10
Protein quality – ಸಸಾರಜನಕದ ಗುಣಮಟ್ಟ	**71**	**43**	**99**

ಉಪಯೋಗಿಸುವುದು ಹೇಗೆ?

ಅಂಗಡಿಗಳಲ್ಲಿ ಬಕ್ ವೀಟ್ ಮತ್ತು ಬಕ್ ವೀಟ್ ಹಿಟ್ಟು ದೊರೆಯುತ್ತದೆ. ಹಿಟ್ಟನ್ನು ಒಂದು ಡಬ್ಬಿಯಲ್ಲಿ ಹಾಕಿ, ಗಾಳಿಯಾಡದಂತೆ ಬಿಗಿಯಾಗಿ ಮುಚ್ಚಿ ರೆಫ್ರಿಜರೇಟರ್ ನಲ್ಲಿ ಇಟ್ಟರೆ ಆರು ತಿಂಗಳು ಉಪಯೋಗಿಸಬಹುದು. ಪಲಾವ್ ಮತ್ತು ಕಿಚಡಿ ಮಾಡಲು ಅಕ್ಕಿಯ ಬದಲು ಬಕ್ ವೀಟನ್ನು ಉಪಯೋಗಿಸಬಹುದು. ಚಪಾತಿ ಮಾಡಲು ಒಂದು ಲೋಟ ಗೋಧಿಹಿಟ್ಟಿಗೆ ಒಂದು ಲೋಟ ಬಕ್ ವೀಟ್ ಹಿಟ್ಟನ್ನು ಬಳಸಿ. ದೋಸೆ ಮತ್ತು ಉತಪ್ಪ ಮಾಡಲು ಅಕ್ಕಿ ಹಿಟ್ಟಿನೊಂದಿಗೆ ಬಕ್ ವೀಟ್ ಹಿಟ್ಟನ್ನು ನಿಮಗಿಷ್ಟವಾದ ಅಳತೆಯಲ್ಲಿ ಬೆರಸಬಹುದು. ರಾಗಿ ಮುದ್ದೆ ಮಾಡುವಾಗ ಕೂಡ ನಿಮಗಿಷ್ಟವಿದ್ದಷ್ಟು ಬಕ್ ವೀಟ್ ಹಿಟ್ಟನ್ನು ಸೇರಿಸಬಹುದು. ಕೊನೆಯ ಮಾತು: ಸಸ್ಯಾಹಾರಿಗಳು ಅಕ್ಕಿ, ರಾಗಿ, ಗೋಧಿಯ ಜೊತೆಗೆ ಬಕ್ ವೀಟ್, ಕೀನ್-ವಾ, ರಾಜಗಿರಿ ಮುಂತಾದ ಬದಲಿ ಧಾನ್ಯಗಳನ್ನು (pseudo cereal) ಉಪಯೋಗಿಸಿದರೆ ಉತ್ತಮ ದರ್ಜೆಯ ಪ್ರೋಟೀನ್ ಪಡೆಯಲು ಸಾಧ್ಯ. ▪

ಬಕ್ ವೀಟ್ ಉತಪ್ಪ

- 1 ಲೋಟ ಬಕ್ ವೀಟ್ ಹಿಟ್ಟು, ½ ಲೋಟ ಅಕ್ಕಿ ಹಿಟ್ಟು ಅಥವಾ ರಾಜಗಿರಿ ಹಿಟ್ಟು (amaranth flour), 1 ½ ಲೋಟ ಗಟ್ಟಿ ಮಜ್ಜಿಗೆ
- ಉಪ್ಪು, ರುಚಿಗೆ ತಕ್ಕಷ್ಟು ಶುಂಟಿ, ಹಸಿಮೆಣಸಿನಕಾಯಿ, ನೀರುಳ್ಳಿ, ಕೊತ್ತಂಬರಿ ಸೊಪ್ಪು - ನಿಮಗಿಷ್ಟವಿದ್ದಷ್ಟು.

ಎಲ್ಲ ಸಾಮಗ್ರಿಗಳನ್ನು ಕಲಸಿ. 15 - 20 ನಿಮಿಷಗಳ ನಂತರ ದೋಸೆ ಹುಯ್ಯಿರಿ.

Bookings Through EMAIL ONLY

Narayana –sugamakannada@yahoo.com.au, Nagabhushan - nagab@hotmail.com

ವಿಚಾರ ವಿಹಾರ

ಮಾಲು, ಅಡಿಲೈಡ್

ನಾವು ಕನ್ನಡಿಗರು ಕೆಂಡವಾಗುವುದು ಕಡಿಮೆ, ಕೆಂಡ ಕೆಂಡವಾಗುವುದಂತೂ ಅತಿ ವಿರಳ, ಬೆಂಕಿಯಾಗುವುದು ಅಪರೂಪ. ಆದ್ದರಿಂದ ನಮಗಾಗಿ ಮಾಡಿದ್ದೆಲ್ಲಾ ನೀರಿನಲ್ಲಿ ಹೋಮ.

ಈ ಮೇಲಿನ ವಾಕ್ಯವನ್ನ ಹೇಳಿದ್ದು ಶ್ರೀ ಜಿ.ಪಿ.ರಾಜರತ್ನಂ ರವರು, ಅವರ "ವಿಚಾರ ರಶ್ಮಿ"ಯಲ್ಲಿ , ೭೦ರ ದಶಕದ ಕನ್ನಡದ ಸ್ಥಿತಿ ನೋಡಿ! ಈಗಿನ ಕನ್ನಡ ಭಾಷೆಯ ಸ್ಥಿತಿ ನಿಮ್ಮ ಊಹೆಗೆ ಬಿಟ್ಟಿದ್ದು.

ನಮಗೆ ಒಬ್ಬಳು ಜನನಿ ಇದ್ದಾಳೆ ಮತ್ತು ನಾವು ಹುಟ್ಟಿದ ಒಂದು ಜನ್ಮ ಭೂಮಿ ಇದೆ.

"ಜನನಿ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರಿಯಸಿ" - ತಾಯಿ ಮತ್ತು ತಾಯಿನಾಡು ಸ್ವರ್ಗಕ್ಕಿಂತಲೂ ಹೆಚ್ಚಿನದು.
ಈ ವಾಕ್ಯದ ಪೂರ್ವಾರ್ಧ? -
"ಅಪಿ ಸ್ವರ್ಣಮಯಿ ಲಂಕಾ ನ ಮೆ ಲಕ್ಷ್ಮಣ ರೋಚತೆ " - ಲಕ್ಷ್ಮಣ, ಈ ಸ್ವರ್ಣಮಯ ಲಂಕ ನನಗೆ ಸಂತಸ ತರುತ್ತಿಲ್ಲ.
ಶ್ರೀರಾಮ ತನ್ನ ತಮ್ಮ ಲಕ್ಷ್ಮಣನಿಗೆ ಹೇಳಿದ್ದ ವಾಕ್ಯಗಳಿವು. ಲಕ್ಷ್ಮಣ ರಾವಣನ ಲಂಕಾಪುರಿಯ ಚಿನ್ನದ ಲೇಪನದ, ರತ್ನಗಳಿಂದ ಸಿಂಗರಿಸಿದ ಸೌಧಗಳನ್ನು ನೋಡಿ, ನಿಬ್ಬೆರಗಾಗಿ ಒಂದು ಕ್ಷಣ ಅವನ ಮನಸ್ಸು ಚಂಚಲವಾಗಿ ಲಂಕೆಯನ್ನು ಹೊಗಳಿರಬಹುದು. ಆಗ ಶ್ರೀರಾಮನಿಗೆ ತನ್ನ ತಾಯಿಯನ್ನು ಮತ್ತು ತಾಯಿನಾಡನ್ನು ನೆನೆದು ತತ್ ಕ್ಷಣವೇ ಈ ಮೇಲಿನ ವಾಕ್ಯಗಳನ್ನು ಉದ್ಗರಿಸಿರಬಹುದು.

ನಮ್ಮ ಅರ್ಥಿಕ ಸ್ಥಿತಿ ಮತ್ತು ಜೀವನದ ಮಟ್ಟವನ್ನು ಉತ್ತಮಗೊಳಿಸಿಕೊಳ್ಳಲು ನಾವು ಬೇರೆ ನಾಡಿಗೆ ಹೋಗಿ ನೆಲಸುವುದು ಸಾಮಾನ್ಯ. ಅಲ್ಲಿ ಹೋಗಿ ನೆಲಸಿದ ನಂತರ, ಲಕ್ಷ್ಮಣನಂತೆ ನಾವು ನೆಲೆಸಿದ ನಾಡನ್ನು ಹೋಗಳಿದರೂ ನಾವು ಶ್ರೀ ರಾಮನಂತೆ ಜನಿಸಿದ ನಾಡನ್ನು ಮರೆಯಬಾರದು. ನಮ್ಮ ಜನ್ಮ ಭೂಮಿಗೆ ಹಿಂತಿರುಗಿ, ತಾಯಿ ಮತ್ತು ತಾಯಿನಾಡಿನ ಋಣವನ್ನು ತೀರಿಸುವ ಪ್ರಯತ್ನವನ್ನು ಮಾಡಲು ಮರೆಯಬಾರದು.

ತಾಯಿ ಮತ್ತು ತಾಯಿ ನಾಡಿನ ನೆನಪಿನ ಜೊತೆ ಶ್ರೀರಾಮ ತನ್ನ ಆ ವಾಕ್ಯದಲ್ಲಿ ತಾಯಿ ಭಾಷೆಯನ್ನೂ ಸೇರಿಸಿಲ್ಲ, ಆಗ ಕೇವಲ ದೇವನಾಗರಿಯೊಂದೇ ವಾಡಿಕೆಯಲ್ಲಿರಬೇಕು.

ನಾವು ಎಲ್ಲೇ ಇರಲಿ ಯಾವ ದೇಶದಲ್ಲೇ ಇರಲಿ, ನಮ್ಮ ಬೇರು ಬಲವಾಗಿ ಬೇರೂರಿರುವುದು ಅಲ್ಲೇ, ಆ ತಾಯಿನಾಡಿನಲ್ಲೇ. ತಾಯಿಯಷ್ಟೇ ತಾಯಿ ಹೇಳಿಕೊಟ್ಟ ಮೊದಲ ಭಾಷೆಯೂ ಮುಖ್ಯ. ಮನಶ್ಯಾಸ್ತ್ರಜ್ಞರ ಪ್ರಕಾರ ಕಲಿತ ಭಾಷೆ ನಮ್ಮ ಕೊನೆಗಾಲದಲ್ಲಿ ಮರೆಯಬಹುದು ಆದರೆ ನಮ್ಮ ಮಾತೃಭಾಷೆ ಮಾತ್ರ ಮರೆಯುವುದಿಲ್ಲವಂತೆ.

ನಮ್ಮ ತಾಯಿನಾಡಿನ ಭಾಷೆ ಮತ್ತು ಸಂಸ್ಕೃತಿ ಉಳಿಸುವ-ಬೆಳೆಸುವ ನೈತಿಕ ಜವಾಬ್ದಾರಿ ನಮ್ಮ ಪ್ರತಿಯೊಬ್ಬರಲ್ಲೂ ಇದೆ.
ಕನ್ನಡಕ್ಕಾಗಿ ಲೆಕ್ಕವಿಲ್ಲದಷ್ಟು ವಿದ್ವಾಂಸರು, ಸಾಹಿತಿಗಳು, ಸಂಗೀತ ವಿದೂಷಿಗಳು, ನಾಟಕಕಾರರು, ಹರಿದಾಸರು, ಆಧ್ಯಾತ್ಮಿಕರು, ಶರಣರು ಮತ್ತು ಕಲಾವಿದರು ಸಾಕಷ್ಟು ಶ್ರಮಿಸಿದ್ದಾರೆ ಮತ್ತು ಶ್ರಮಿಸುತ್ತಿದ್ದಾರೆ.
ಶ್ರೀ ಜಿ.ಪಿ.ರಾಜರತ್ನಂ ರವರು ನಿರಾಸೆಯಲ್ಲಿ ಹೇಳಿದಂತೆ ಇವರೆಲ್ಲರ ಶ್ರಮ ನೀರಿನಲ್ಲಿ ಹೋಮವಾಗದಿರಲಿ, ಹೋಮದಲ್ಲಿನ ಬೂದಿಯಾಗದಿರಲಿ.
ಅವರೆಲ್ಲರ ಕೃತಿಗಳನ್ನು ಸಮಯ ಸಿಕ್ಕಲ್ಲಿ ಓದುವ, ನೋಡುವ, ಅನುಭವಿಸುವ ಮತ್ತು ಹೊಸ ಸಾಹಿತ್ಯಾಸಕ್ತರಿಗೆ ಸಾಹಿತ್ಯ ಕೃಷಿ ಮಾಡಲು ಉತ್ತೇಜಿಸುವ ಹವ್ಯಾಸ ನಮ್ಮದಾಗಲಿ. ಈ ಹವ್ಯಾಸ ಕನ್ನಡ ಭಾಷೆ ಉಳಿಸುವುದಕ್ಕೆ ಮತ್ತು ಬೆಳೆಸುವುದಕ್ಕೆ ಅನುಕೂಲವಾಗುತ್ತದೆ.
ನಮ್ಮದು ಈಗ ತಾಂತ್ರಿಕ ಲೋಕವಾಗಿದೆ. ಪುಸ್ತಕವನ್ನು ಕೊಳ್ಳುವ ಹವ್ಯಾಸ ತೀರ ಕಡಿಮೆಯಾಗಿಬಿಟ್ಟಿದೆ. ಆಗೊಮ್ಮೆ ಈಗೊಮ್ಮೆಯಾದರು ಕನ್ನಡ ಪುಸ್ತಕಗಳನ್ನು ನಾವು ಕೊಳ್ಳಬೇಕು ಮತ್ತು ಪ್ರಕಟಿಸಿದವರಿಗೆ ಈ ಮೂಲಕ ಉಪಕರಿಸಬೇಕು.

ಕನ್ನಡ ಭಾಷೆ ಇಂಗ್ಲೀಷ್ ಮಯವಾಗದಿರಲಿ, ಕನ್ನಡ ಭಾಷೆ ನಿರಂತರವಾಗಿ ಬೆಳೆಯಲಿ ಮತ್ತು ಶಾಶ್ವತವಾಗಿ ಉಳಿಯಲಿ .

ಕನ್ನಡಾಂಬೆಗೆ ಜಯವಾಗಲಿ.▪

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ನಮ್ಮಮ್ Free...ಥಂ

ಬ್ರಿಟಿಷರಿಗೆ ಗೇಟ್ ಪಾಸ್ ಕೊಟ್ಟು ಅರವತ್ತೇಳು ವರ್ಷಗಳಾದವು. ಕೆಲವರು ಅದನ್ನು ಇಂಡಿಪೆಂಡೆನ್ಸ್ ಎಂದರು. ಕೆಲವರು ದನಕ್ಕೂ, ಜನಕ್ಕೂ ಆಹಾರ ದಕ್ಕುವುದು ಪೆಂಡಿಂಗ್ ನಲ್ಲೇ ಇರುವುದರಿಂದ 'ಹಿಂಡಿ' ಪೆಂಡೆನ್ಸ್ ಎನ್ನುತ್ತಿದ್ದಾರೆ. ಇನ್ನು ಕೆಲವರು ಇತರರ ಮೇಲಿನ ಅವಲಂಬನ ಕಳೆದುಕೊಳ್ಳಲಾಗದೆ 'in-dependence' ಎನ್ನುತ್ತಿದ್ದಾರೆ. 'ಸಬ್ ಕಾಂಟಿನೆಂಟೋಂಕಾ ಆಹಾರ್ ಮಿಲ್ತಾ ಹೈ. ಇಸ್ಲಿಯೇ ಭಾರತ್ ಕೋ ಸಬ್ ಕಾಂಟಿನೆಂಟ್ ಕಹತೇ ಹೈ' ಎನ್ನುವ ಮಾತುಗಳು ಕೇಳಿಬರುತ್ತಿರುವ ಈ ಸಂದರ್ಭದಲ್ಲಿ, ತಾವುಗಳು 'ವಾಟ್ ಡಸ್ ಇಂಡಿಪೆಂಡೆನ್ಸ್ ಮೀನ್ ಟು ಯೂ' ಎಂಬ ಪ್ರಶ್ನೆಗೆ ಕೆಲವರು ನೀಡಿದ ಜವಾಬುಗಳನ್ನು ಪರಾಂಬರಿಸಿ ಕೃತಾರ್ಥರಾಗಬೇಕೆಂದು ಬಿನ್ನಹ:

ಪೋಕ್ರಿ: ಇಂಡಿಪೆಂಡೆನ್ಸಂದ್ರೆ ಫುಲ್ ಇಂಡಿಪೆಂಡೆನ್ಸು ಮಗಾ. ಎಂಗಾನಾ ಬೈಕ್ ಓಡ್ಸು, ವೀಲಿಂಗ್ ಮಾಡು, ಡಿಕ್ಕಿ ಹೊಡಿ, ಫುಟ್ ಪಾತ್ ಮೇಲೆ ಮಲಗಿರೋವ್ರ ಮೇಲೂ ಓಡ್ಸು... ಮಚ್ಚಾ, ದೇವ್ರಾಣೆ ಏಳ್ತೀನ್ಕೇಳು. ಏನಂದ್ರೆ ಏನೂ ಆಗಲ್ಲ ಡ್ಯೂಡ್. ಸಿಕ್ಕಾಕ್ಕೊಂಡ್ರೆ ಎರ್ಡ್ ಗಾಂಧಿ, ದೊಡ್ಡು... ಅಷ್ಟೇ. ಸೂಪರ್ ಕಂಟ್ರಿ ಮಗಾ ನಮ್ದು. ಬೋಲೋ ಇಟಲಿ ಮಾತಾಕೀ... ಸ್ಸಾರಿ... ಬೋಲೋ ಭರತ್ಮತಾ ಕೀ...

ಛೋಕ್ರಿ: ಹೇ, ಕೂಲ್ ಯಾರ್! ನಮ್ಕಂಟ್ರಿ, ಫ್ರೀಡಂ ಎಂಡ್ ಆಲ್; ರಿಯಲಿ ಇಟ್ಸ್ ಮೈಂಡ್ ಬ್ಲೋಯಿಂಗ್. ವಾಟ್ ಐ ಮೀನ್ ಟು ಸೇ ಈಸ್, ನಾನೇನ್ಹೇಳ್ಬೇಕಂತಿದೀನಂದ್ರೆ ಇಟ್ಸ್ ಆಸಮ್. ಯಾ... ದೇರ್ ಆರ್ ಎ ಫ್ಯೂ ರೇಪ್ಸ್ ವಿಚ್ ಆರ್ ಬಾದರಿಂಗ್ ಅಸ್. ಆದ್ರೂ ಮಿಡ್ ನೈಟಲ್ಲಿ ಸರ್ಫಿಂಗ್ ದ ಸ್ಟ್ರೀಟ್ಸ್, ಯೂ ನೋ... ಥ್ಯಾಂಕ್ಸ್ ಟು ದ ಕರ್ನಾಟಕ ಸಿಎಂ. ಹತ್ತಕ್ಕೆ ನಶೇನೇ ಹತ್ತಿರಲ್ಲ ಅಂತ ಒನ್ ಓ ಕ್ಲಾಕ್ ವರೆಗೆ ಬಾರ್ಸ್ ಎಂಡ್ ಹೊಟೆಲ್ಸ್ ಓಪನ್ ಮಾಡಿರಕ್ಕೆ ಪರ್ಮಿಶನ್ ಕೊಟ್ರೋ ಏನೋ... ಎನಿವೇ, ವಂಡರ್ ಫುಲ್. ಗಾಂಧೀಜಿ ಹೇಳಿದ್ದೂ ಅದೇ ಅಲ್ವಾ. ಮಿಡ್ ನೈಟಲ್ಲಿ ಹುಡ್ಗೀರು ಸ್ಟ್ರೀಟ್ಸಲ್ಲಿ ವಿತೌಟ್ ಫಿಯರ್ ಸುತ್ತಾಡ್ಬೇಕು ಅಂತ... ವಿ ಆರ್ ಆನ್ ದ ರೈಟ್ ಕೋರ್ಸ್ ಟು ಫುಲ್ ಫಿಲ್ ಹಿಸ್ ವಿಷನ್. ಗ್ರೇಟ್ ಕಂಟ್ರಿ. ಇಂಡಿಯಾ. ನಮ್ಗೆ ಫ್ರೀಡಂ ಆಫ್ ಡ್ರೆಸಿಂಗ್, ಟಾಕಿಂಗ್, ಚ್ಯಾಟಿಂಗ್, ಎಲ್ಲ ಇದೆ. ಇಟ್ಸ್ ಕೂಲ್ ಮ್ಯಾನ್....

ನಗರವಾಸಿ: ಸ್ವಾತಂತ್ರ್ಯ ಅಂದ್ರೆ ನಮ್ದೇ ಕಣ್ರೀ. ಸಿಂಗಪುರ, ಅಮೆರಿಕ, ಇಂಗ್ಲೆಂಡು ಇವೆಲ್ಲ ದೇಶಗಳೇನ್ರೀ? ನೀವು ತಿಂದ ಮಾವಿನಹಣ್ಣಿನ ಓಟೇನ ಎದುರುಮನೆಯ ಕಾಂಪೌಂಡಿಗೆ ಬಿಸಾಕಕ್ಕೆ ಸ್ವಾತಂತ್ರ್ಯ ಇಲ್ಲ ಅಂದ್ಮೇಲೆ ಅದೇನು ದೇಶಗಳು ಬಿಡಿ. ನಮ್ಮಲ್ಲಿ ಎಲ್ಲೆಲ್ಲಿ ಬೇಕಾದ್ರೂ ಏನೇನು ಬೇಕಾದ್ರೂ ಬಿಸಾಡಬಹುದು. ಗುರಿಯಿಟ್ಟು ಮೂರುಮನೆ ಆಚೆ ಇರೋ ಸೈಟಿಗೆ ಕಸದ ಪ್ಯಾಕೆಟ್ ಎಸೆಯೋ ಮಜ ಅವರಿಗೆಲ್ಲಿ ಗೊತ್ರೀ? ಆ ತರಹ ಗುರಿಯಿಟ್ಟು ಎಸೆಯೋ ಪ್ರಾಕ್ಟೀಸ್ ಮಾಡಿದರೆ ನಮ್ಮಲ್ಲಿ ಇನ್ನೂ ಒಂದಷ್ಟು ಅಭಿನವ್ ಬಿಂದ್ರಾಗಳು, ಷಾಟ್ ಪುಟ್ ಮಾಸ್ಟರ್ ಗಳು ಉದಯ ಆಗ್ತಾರೆ. ಐ ಲವ್ ಮೈ ಇಂಡಿಯಾ.

ಗ್ರಾಮವಾಸಿ: ಸೊಸಂತ್ರಾಂದ್ರೆ ನಮ್ದೇಯ. ಸಿದ್ರಾಮಣ್ಣ ಬಂದಾಗಿಂದ ಸೊಸಂತ್ರ ಇನ್ನೂ ಎಚ್ಚಾಗದೆ. ಮೊದಮೊದಲು ನಮ್ಗೇಯ್ಕೆ ನಾವೇ ಮಾಡ್ಬೇಕಿತ್ತು. ಈಗ ಅಂಗೆಲ್ಲ ಏನಿಲ್ಲ ಬುಡಿ. ನಾವು ಕುಂತ ಜಾಗಕ್ಕೇ ಒಂದ್ರುಪಾಯಿಗೆ ಅಕ್ಕಿ ಕೊಡ್ತಾ ಅವ್ರೆ, ನನ್ಮಗೀ ಇಸ್ಕೂಲಿಗೆ ಓದ್ರೆ ಎಲ್ಡ್ರುಪಾಯಿ; ಮಗಿ ಮದುವೀಗೆ ಸಾದಿಬೋಗ್ಯ. ಕೇಮೆ ಇಲ್ಲ ಅಂದಮ್ಯಾಕೆ ಸೊಸಂತ್ರಾನೇ ಅಲ್ಲವ್ರಾ. ನಾನು ಚಂಜೀಮಟ್ಟ ಮನೀನಾಗಿದ್ದು, ಸೊಸಂತ್ರವಾಗಿ ಗಡಂಗಿಗೆ ಓಗಿ, ಸಂದಾಗೆ ಪೋಟ್ಕೊಂಡು 'ಬ್ರಮ್ಮ ನಿಂಗೆ ಜೋಡಿಸ್ತೀನಿ ಎಂಡ ಮುಟ್ಟಿದ್ ಕೈನ' ಅಂತ ಸೊಸಂತ್ರವಾಗಿ ಆಡ್ಕೊಂಡು ಸಂತೋಸ್ವಾಗಿದೀನಿ ನನ್ನೊಡ್ಯ. ಸೊತಂತ್ರಾಂದ್ರೆ ನಮ್ದೇಯ. ಒಂದೇ ತೊಂದ್ರೆ - ಫುಲ್ ಟೈಟ್ ಆದಾಗ ಸೊಸಂತ್ರವಾಗಿ ನಡ್ಯಾಕಾಗಾಕಿಲ್ಲ. ಇದಕ್ಕೂ ಸಲ್ಕಾರ ಏನಾನಾ ಕುಡುಕರ್ನ ಡೋರ್ ಡೆಲಿವರಿ ಮಾಡೋ ಯವಸ್ತೆ ಮಾಡ್ಬುಟ್ರೆ ಇನ್ನೂ ಸಂದಾಕಿರ್ಬೈದು ನನ್ನೊಡ್ಯ.

ಅಜ್ಞಾನಪೀಠಿ: ಎನಿತು ವಿಷಯದಿ ಎನಿತು ಜನಗಳು ಮುಗ್ಧರೈ ಈ ನಾಡೊಳು. ಮೂತ್ರಿಗಳ ಬಗ್ಗೆ ಅನಂತವಾಗಿ ಕೆಟ್ಟ ಮಾತನಾಡಿದರೂ ನನ್ನಂತಹ ಬೀದಿಬಸವನಿಗೂ ಪ್ರಶಸ್ತಿ ನೀಡುವ ಜನರಿರುವ ನಾಡೇ ಸ್ವಾತಂತ್ರ್ಯಕ್ಕೆ ಹೆಸರಾದುದಲ್ಲವೆ! ಬೇರೆಡೆ ನನ್ನಂತೆ ಟೀಕೆ ಮಾಡಿದ್ದಿದ್ದರೆ ಇಂದಿಗೆ ನನ್ನ ಪುಣ್ಯತಿಥಿ! ಇಲ್ಲಿ ನಾನು ಪುಣ್ಯವಂತ ಅತಿಥಿ! ವಿಷಯಕ್ಕೆ ಬರ ಇದ್ದರೂ ವಿಷಕ್ಕೆ ಬರ ಇಲ್ಲದವರ ಬರಹಕ್ಕೆ, ಹಣೆಬರಹಕ್ಕೆ ನಮ್ಮ ಅತಂತ್ರಭಾರತವೇ... ಕ್ಷಮಿಸಿ; ಸ್ವತಂತ್ರ ಭಾರತವೇ ಶ್ರೇಷ್ಠ. I am proud of my country where any and everybody can envisage a free for all !!!

ಮುಂದಿನ ಪುಟ ನೋಡಿ ...

ಜ್ಯೋತಿಷಿ: ದೇಶದಲ್ಲಿ ಗುರುವಿನ ಸ್ಥಾನ ಉಚ್ಚವಾಗಿದೆ, ಬುಧನ ಸ್ಥಾನ ನೀಚವಾಗಿದೆ. ಹೀಗಾಗಿ ಬುದ್ಧಿವಂತರು ನೀಚವಾದ ಸ್ಥಾನದಲ್ಲೂ ನಮ್ಮಂತಹ ಗುರುಗಳು ಉನ್ನತ ಸ್ಥಾನದಲ್ಲೂ ಇರ್ತೀವಿ. ಆದ್ದರಿಂದ ನಮ್ಮಂತಹವರಿಗೆ ಬೇರೆ ಎಲ್ಲ ದೇಶಗಳಿಗಿಂತ ಭಾರತದಲ್ಲಿ ಫೀಡಂ ಜಾಸ್ತಿ. ಏನಂದ್ರಿ? ಫೀಡಂ ಅಲ್ಲ, ಫ್ರೀಡಂ ಅಂದ್ರಾ? ಊಹೂಂ; ನಮಗಿಷ್ಟ ಬಂದಷ್ಟು ಫೀ ತೊಗೊಳಕ್ಕೆ ಫ್ರೀಡಂ ಇರೋದ್ರಿಂದ ಫೀಡಂ ಅನ್ನೋ ಪದವೇ ಕರೆಕ್ಟು.

ಬ್ರೇಕಿಂಗ್ ನ್ಯೂಸಿಗ:

ಅಪಾರ ಸುಳ್ಳು ಬೆರೆಸಿ ನುಡಿವ ಚಾನಲ್ ನಮ್ಮದು
ಟಿಆರ್ ಪಿ ಕಡೆಯೆ ನೋಟ ನೆಡುವ ಕೀರ್ತಿ ನಮ್ಮದು
ಅಪಾರ ಸುಳ್ಳರೇ...

ಹೊಸೆದು ಸುಳ್ಳು ಸುದ್ದಿಗಳನು ಬಿತ್ತರಿಸುತ್ತಾ
ಬೊಗಳೆ ಚರ್ಚೆ ಪ್ಯಾನಲುಗಳ ಸೇರಿಸಿ ಸುತ್ತ
ತೋರ್ಸಿದ್ದನ್ನೆ ತೋರ್ಸಿ ಎಳೆದು ಎಳೆದು ಝಾಡ್ಸಿ
ಬ್ಲ್ಯಾಕುಮೇಯ್ಲಿನಲ್ಲೆ ಬೆಳೆವ ಜಾಣ್ಮೆಯ ಬೆಳೆಸಿ
ಅಪಾರ ಸುಳ್ಳು ಬೆರೆಸಿ.....

ಕನ್ನಡ ಓರಾಟಗಾರ: ನಮಗಿರೋ ಸೊತಂತ್ರದ ಬಗ್ಗೆ ನನಗೆ ಬಾಳ ಎಮ್ಮೆ ಇದೆ. ಪ್ರತಿ ಹಾಗಷ್ಟಲ್ಲಿ ನಾವು ಹದ್ದೂರಿಯಾಗಿ ಸ್ವಾತಂತ್ರೋಶವ ಮಾಡ್ತೀವಿ. ಬಾವಾಟ ಆರ್ಸಿ, ಮಕ್ಕಳಿಗೆ ಸಿಇ ಅಂಚೆ, ಮುಕ್ಯ ಹತಿತಿಗಳ ಬಾಸ್ಣ ಮಾಡಿಸ್ತೀವಿ. ನಮ್ಮ ವೇಲಾಯುಧನ್ ಮಾಷ್ರು 'ಬೋಳೋ ಪಾರತ್ ಮದಾಗೀ ಚೈ' ಅಂತ ಏಳ್ದಾಗ ಮಕ್ಕಳು ಅಂಗೇ ಏಳತ್ತೆ. ನಮಗೆ ಬಾಸೆ ಸೊತಂತ್ರ ಇದೆ. ನಾವು ಎಂಗ್ ಬೇಕಾದ್ರಾ ಮಾತಾಡ್ಬೋದು, ಏನ್ಬೇಕಾದ್ರ ಮಾತಾಡ್ಬೋದು. ಹದಕ್ಕೇ ನನಗೆ ಬಾಳ ಎಮ್ಮೆ ಇದೆ. ಹಿಂಡಿಯಾಗೇ ಜೈ. ಕಳ್ನಾಟಕಾಗೇ ಜೈ, ಕನ್ನಡಾಗೇ ಜೈ. ಹಿಂಟ್ರೂ(interview) ಮಾಡಿದ ನಿಮಗೂ ಜೈ.

ಲಾರಿ ಡ್ರೈವರ್: ಎಂಥಾ ಫ್ರೀಡಮ್ಮಯ್ಯ ನಮ್ಮದೆಂಥಾ ಫ್ರೀಡಮ್ಮಯ್ಯ
ಟನ್ನುಗಟ್ಟಲೆ ಏರ್ಸಿ ಅಡ್ಡಾದಿಡ್ಡಿ ಓಡ್ಸಿ 2
ಭರದಿ ಹರಿವ ನಮ್ಮದೆಂಥಾ ಫ್ರೀಡಮ್ಮಯ್ಯ

ಬಲುಕೆಟ್ಟ ರಸ್ತೆಯಲ್ಲಿ ಚಲಿಸುತ ಹುಳಿಹೆಂಡವನಿತು ಕುಡಿಯುತ
ಟೋಲುಗೇಟಿನಲ್ಲಿ ನೋಟನೆಸೆಯುತ ಓಲಾಟದಲ್ಲೆ ಚಲಿಪಾ
ಎಂಥಾ ಫ್ರೀಡಮ್ಮಯ್ಯ

ವೈಯಾರಭಟ್ಟ: ನನ್ನಂತಹ ಇನ್ವೆಸ್ಟಿಗೇಟಿಂಗ್ ಸಾಹಿತಿಗಳಿಗಂತೂ ನಮ್ದೇಶದ್ ಫ್ರೀಡಂ ಸೂಪರ್ರೋ ಸೂಪರ್ರು. ಕರಡಿಗೆ ಜಾಮೂನು ತಿನ್ನಿಸೋದು, ಗಂಡುಮಕ್ಕಳ ತವರುಮನೆ ಕಂಡುಹಿಡಿಯೋದು, ಮುದ್ದೆ ಬುಡ, ಇಡ್ಲಿ ತುದಿ ಕಂಡುಹಿಡಿಯೋದು, ಇತ್ಯಾದಿ ಇಂವೆಂಷನ್ ಗಳಿಗೆ ಸಾಹಿತ್ಯದ ಮೂಲಕ ಫ್ರೀಡಂ ಕೊಡೋ ಕನ್ನಡನಾಡು, ಇಂಡಿಯಾ ದೇಶದಲ್ಲಿ ಇರೋ ಸ್ವಾತಂತ್ರ್ಯ ಇನ್ನೆಲ್ಲೂ ಇಲ್ಲ. ಇನ್ನುಮುಂದೆ ಗೊರಿಲ್ಲಾಗೆ ಬರ್ಗರ್ ತಿನ್ನಿಸಬಹುದೇ, ರಸಗುಲ್ಲಾದು ತುದಿ ಯಾವುದು, ಇತ್ಯಾದಿ ಸಾಹಿತ್ಯದ ಮೂಲಕ ಇಂಡಿಪೆಂಡೆನ್ಸ್ ಕೊಟ್ಟ ಇಂಡಿಯಾಗೆ ಸಾಕಷ್ಟು ಕೊಡುಗೆ ಕೊಡ್ತೀನಿ. ಮೇರಾ ಬಾರಾತ್ ಮಹಾನ್.

ಸಿನೆಮಾ ನಿರ್ದೇಶಕ: ನಮಗೆ ಇಷ್ಟ ಬಂದ ಹಾಗೆ ಫಿಲ್ಮ್ ಗೆ ಹೆಸರಿಡೋಕ್ಕೆ, ಇಷ್ಟೇ ಇಷ್ಟು ಬಟ್ಟೇಲಿ ಹೀರೋಯಿನ್ನನ್ನ ಮಳೆಯಲ್ಲಿ ನೆನೆಸೋಕ್ಕೆ, ಹೀರೋ ಬಾಯಲ್ಲಿ ಕಾಮಶಾಸ್ತ್ರದ ಎಲ್ಲಾ ರೀತಿಗಳನ್ನೂ ಹೇಳಿಸೋಕ್ಕೆ, ಪೊಲೀಸರೂ ಉಪಯೋಗಿಸಕ್ಕೆ ಹೇಸುವಂತಹ ಭಾಷೆಯನ್ನ ಹೀರೋ ಕೈಲಿ ಆಡಿಸೋಕ್ಕೆ, ಇನ್ನೂ ಇಂತಹ ಬೇಝೂನ್ ವಿಷಯಗಳಿಗೆ ಸ್ವಾತಂತ್ರ್ಯ ಇದೆ. ಮುಂದಿನ ಚಿತ್ರ ಲಂಗೋಟಿ ಲಕ್ಷ್ಮಣ, ಬಿಕಿನಿ ಬಿಂದಿಯಾ ಚಿತ್ರದಲ್ಲಿ ಹೊಸಹೊಸ ಬೈಗುಳ, ಪ್ರಪಂಚದ ಅತಿ ಚಿಕ್ಕ ಬಟ್ಟೆ ಎಲ್ಲವೂ ಇರತ್ತೆ. ಇಷ್ಟಕ್ಕೆಲ್ಲ ಸ್ವಾತಂತ್ರ್ಯ ಕೊಟ್ಟ ಜನನೀ, ಜನ್ಮಭೂಮಿಗೆ ನಮೋ ನಮಃ.

ಗೋಪ್ಯಾನಂದಸ್ವಾಮಿ: ಕಾವಿ ಹಾಕಿದ್ದೇ ಹಾಕಿದ್ದು, ಹೆಣ್ಣುಗಳೊಡನೆ ಹೇಗೆಂದರೆ ಹಾಗೆ ನಡೆಯುವ ಸ್ವಾತಂತ್ರ್ಯ ದೊರಕಿದೆ. ಅದಕ್ಕೆ ತಕ್ಕಂತೆ ಸರ್ಕಾರವೇ ಎಕರೆಗಟ್ಟಲೆ ಕಾಡಿನಜಾಗದಲ್ಲಿ ನಾನು ಕುಳಿತಿರುವ ಸ್ವಾತಂತ್ರ್ಯ ನೀಡಿದೆ. ಹಣದ ಸ್ವಾತಂತ್ರ್ಯ, ಮಣ್ಣಿನ ಸ್ವಾತಂತ್ರ್ಯ, ಹೆಣ್ಣಿನ ಸ್ವಾತಂತ್ರ್ಯ... ಓಹ್! ಜಗದೊಳಿಲ್ಲವು ಈ ಪರಿಯ ಅನುಪಮ ಸ್ವಾತಂತ್ರ್ಯ. ಈ ಹಾಳು ಸಿಸಿಟಿವಿ ಒಂದು ಇಲ್ಲದಿದ್ದಿದ್ದರೇ....

ಮುಂದಿನ ಪುಟ ನೋಡಿ ...

ರೇಪಿಸ್ಟ: ಬಸ್ಸಿನಲ್ಲಿ ರೇಪು, ರೈಲಿನಲ್ಲಿ ರೇಪು
ಕ್ಲಾಸಿನಲ್ಲಿ ರೇಪು, ರೋಡಿನಲ್ಲಿ ರೇಪು
ಬೀಸಬಂದ ಪೇದೆ ಮೇಲೆ ಹಾಕುತೀವಿ ರೋಪು
ಕೇಸು ಬುಕ್ಕು ಮಾಡಹೋದ್ರೆ ಇಂಪ್ಲುಯೆನ್ಸು ಟಾಪು
ಲೂಪುಹೋಲು ಕಾಯ್ದೆಯಲ್ಲಿ ಅದುವೆ ನಮಗೆ ಹೋಪು
ಡಿಪೆಂಡಾಗ್ದೆ ಇಂಡಿಪೆಂಡೆಂಟಾದಳಂದ್ರೆ ಹೆಣ್ಣು
ತಪ್ಪು ಮಾಡ್ದ ನಮ್ಮ ಬಾಯ್ಗೆ ಬೀಳ್ವುದಯ್ಯ ಮಣ್ಣು
ತಪ್ಪೆ ಒಪ್ಪು ಬೆಪ್ಪೆ ಕೇಳು ಸ್ವೇಚ್ಛೆಗಡ್ಡಿಯಿರದಿರೆ
ಇಂಡಿಪೆಂಡೆನ್ಸ್ ಲೆಕ್ಕದಲ್ಲಿ ಹಾಳುಬೀಳ್ವುದೀ ಧರೆ

ನಾನು: ಯೇ ದಿಲ್ ಹೈ ಮುಷ್ಕಿಲ್ ಜೀನಾ ಯಹಾ... ಝರಾ ಹಟ್ಕೇ. ಝರಾ ಬಚ್ಕೇ ಯಹ್ ಹೈ ಭಾರತ್ ಮೇರೀ ಜಾನ್ ▪

ಹುಬ್ಬಳ್ಳಿ ಜಂಕ್ಷನ್ ...

(ನಮ್ದು ಖಡಕ್ ಭಾಷೆರೀಯಪ್ಪ)

ಬಸವರಾಜ್ ಕೆಂಪಲಿಂಗಣ್ಣವರ್

ಉಂಡಿ ಹಬ್ಬ

ಶ್ರಾವಣ ಮಾಸದ ಐದನೇ ದಿವಸಕ್ಕ ಬರುದು ನಾಗರ ಪಂಚಮಿ. ಈ ಪಂಚಮಿ ಅಂದ್ಮುಡ್ಲೆ ನೆನಪ ಬರುದು ತರ ತರ ಉಂಡಿ, ಚಕ್ಕ್ಲಿ ಮತ್ತ ಇನ್ನು ಏನೇನೂ ಸಿಹಿ ತಿನಸು. ಈ ಹಬ್ಬಕ್ಕ ಹೆಣ್ಣುಮಕ್ಕಳ ಹಬ್ಬ ಅಂತಾರ ಯಾಕಂದ್ರ ಅವತ್ತ ಎಲ್ಲ ಹೆಣ್ಣುಮಕ್ಕಳ ಹೋಗಿ ನಾಗರಕಲ್ಲಿಗೋ, ಹುತ್ತಕ್ಕೋ ಅಥವಾ ಮನ್ಯಾಗ್ ಹುತ್ತಿನ ಮಣ್ಣಿಂದ ಮಾಡಿದ್ದ ನಾಗರಮೂರ್ತಿಗೆ ಹಾಲೆರಿತಾರ್.

ನಾಗರ ಪಂಚಮಿ ತಯ್ಯಾರಿ ಹದಿನೈದ ದಿವಸ ಮೊದಲ ಶುರುಹಚ್ಕೊಂಡಿರತಾರ. ಯಾಕಂದ್ರ ಕಡಮಿ ಅಂದ್ರು ನಾಲ್ಕೈದು ಥರ ಉಂಡಿ, ಚಕ್ಕಲಿ ಮತ್ತ ಇನ್ನು ಇನ್ನೇನೂ ಮಾಡಿರತಾರ. ಅವತ್ತಿನ ದಿನ ಮಾತ್ರ ತಂಬಿಟ್ಟು, ಉದ್ದಿನ ಕಡಬು, ಸಿಹಿ ಕಡಬು ಮಾಡಿರ್ತಾರ ಯಾಕಂದ್ರ ಸಾತ್ವಿಕ್ ಆಹಾರ ತಿಂದ ಪಾರಮಾರ್ಥಿಕ ಚಿಂತಿ ಮಾಡುವುದರಿಂದ ಮನಸಾ ಹಗರಾಗಿ ನೆಮ್ಮದಿ ಸಿಗತೈತಿ ಅಂತ.

ಇನ್ನೊಂದ ವಿಶೇಷ ಅಂದ್ರ ಈ ಹಬ್ಬಕ್ಕ ಅಣ್ಣ ಹೋಗಿ ತಂಗಿನ ತೌರಮನಿಗಿ ಕರಕೊಂಡ ಬರುದೊಂದ ಪದ್ಧತಿ. ತಂಗಿ ಆದವಳು ಗಂಡನ ಮನ್ಯಾಗ್ ಅಣ್ಣ ಬರತಾನ್ ಅಂತ ದಾರಿ ಕಾಯ್ಕೊಂಡು ಕುಂತಿರ್ತಾಳ. ಈ ಪದ್ಧತಿ ಯಾಕ್ ಮಾಡ್ಯಾರ್ ಅಂದ್ರ ತಂಗಿ ಆದವಳು ಹಾಲೆರೆದು ನನ್ನಣ್ಣ ಮತ್ತು ನನ್ನ ತವರು ಮನಿ ಸುಖದಿಂದ ಇರಲಿ ಅಂತ ಬೇಡ್ಕೊಳತಾಳ. ಇದ್ರಿಂದ ಸಂಬಂಧ ಗಟ್ಟಿ ಉಳಿತಾವ.

ಮತ್ತ ಇನ್ನೊಂದ ವಿಶೇಷ ಅಂದ್ರ ಈ ಉತ್ತರ ಕರ್ನಾಟಕದ ಹಳ್ಳಿಕಡಿ ಅವತ್ತ ಸಂಜಿಕ ಜೋಕಾಲಿ ಆಡು ಸ್ಪರ್ಧೆ ಇಟ್ಟಿರತಾರ. ಅದ ಹ್ಯಾಂಗ ಅಂದ್ರ, ಜೋಕಾಲಿ ದೊಡ್ಡ ಮರಕ್ಕ ಕಟ್ಟಿರ್ತಾರ್, ಇನ್ನೊಂದ ತುದಿಗೆ ಚಕ್ಕಲಿ, ಉಂಡಿ ಕಟ್ಟಿ ಜೋತ ಬಿಟ್ಟಿರತಾರ. ಒಬ್ಬಬ್ಬರ ಜೋಕಾಲಿ ಆಡ್ಕೊಂಥ ಇನ್ನೊಂದ ತುದಿ ಕಟ್ಟಿದ್ದು ಉಂಡಿ, ಚಕ್ಕಲಿ ಬರಿ ಬಾಯಿಂದ ಕಿತ್ತಗೊಂಡು ತಿನಬೇಕು, ಕೈಇಂದ ಯಾರು ಮುಟ್ಟಬಾರದ. ಈ ಆಟ ನೋಡಾಕು ಬಾಳಚೆಂದ, ಆಡಾಕಂತು ಇನ್ನುಚೆಂದ.▪

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ಕುರುಡು!

ಕನಕಾಪುರ ನಾರಾಯಣ

ಗುಬ್ಬಿ ಮರಿ ಹುಟ್ಟಿನಿಂದಲೇ ಕುರುಡಾಗಿತ್ತು.ಬೇರೆಲ್ಲಾ ಹಕ್ಕಿಗಳು ಹಾರಿ ದೂರ ಸಾರಿ ಆಹಾರ ತರುವುದು ಅದರ ಗಮನಕ್ಕೆ ಬಂದಿತು.ಒಂದು ದಿನ ಮರಿ ಅಮ್ಮನನ್ನು ಕರೆದು "ಅಮ್ಮಾ ನನಗೆ ನಿಜವಾಗಿಯೂ ಕಣ್ಣುಕಾಣುತ್ತದೆ" ಎಂದಿತು.ತಾಯಿ ಗುಬ್ಬಿ ಅದನ್ನು ಪರೀಕ್ಷೆ ಮಾಡಲೆಂದು ಅದರ ಮುಂದೆ ಎರಡು ಜೋಳದ ಕಾಳುಗಳನ್ನು ಇಟ್ಟು "ಏನಿದು" ಎಂದು ಕೇಳಿತು.ಅದಕ್ಕೆ ಮರಿ ಗುಬ್ಬಿ "ಅರೆ ಇದು ಕಲ್ಲುಗಳು" ಎಂದಿತು.ಆಗ ತಾಯಿ ಗುಬ್ಬಿ "ಮಗೂ ನೀನು ಕುರುಡು ಮಾತ್ರವಲ್ಲ ನೀನು ವಾಸನೆ ಕೂಡಾ ತಿಳಿಯುವ ಶಕ್ತಿಯನ್ನೂ ಕಳೆದುಕೊಂಡಿರುವೆ".ಎಂದು ಹೇಳಿತು. ▪

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚೆಲುಮೆ - ಸೆಪ್ಟೆಂಬರ್ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದ ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ತೆಂಗಿನ ಕಾಯಿ ಹೋಳಿಗೆ

ಬೇಕಾಗುವ ಸಾಮಗ್ರಿಗಳು

- ಒಂದು ತೆಂಗಿನ ಕಾಯಿ, ಒಣ ಕೊಬ್ಬರಿ ಒಂದು ಲೋಟ
- ಗೋಧಿ ಹಿಟ್ಟು ಅರ್ಧ ಲೋಟ
- ಮೈದಾ ಹಿಟ್ಟು ಅರ್ಧ ಕಿಲೋ
- ಯಾಲಕ್ಕಿ ೪,ಗಸಗಸೆ 50 ಗ್ರಾಂ
- ಎಣ್ಣೆ/ತುಪ್ಪ ಕಾಲು ಕಿಲೋ

ಮಾಡುವ ವಿಧಾನ

- ಕಾಯಿ ತುರಿಯನ್ನು ನೀರಿಲ್ಲದೇ ರುಬ್ಬಿ ಬೆಲ್ಲ ಸೇರಿಸಿ ಬಾಣಲೆಯಲ್ಲಿ ಬಾಡಿಸಿ
- ಏಲಕ್ಕಿ ಪುಡಿ, ಒಣಕೊಬ್ಬರಿ ಬೆರೆಸಿ ನಿಂಬೆ ಗಾತ್ರದ ಉಂಡೆಗಳನ್ನು ಮಾಡಿಕೊಳ್ಳಿ
- ಮೈದಾ ಮತ್ತು ಗೋಧಿ ಹಿಟ್ಟನ್ನು 4/6 ಚಮಚ ಎಣ್ಣೆ ಹಾಕಿ ಹದವಾಗಿ ಕಲಸಿಕೊಳ್ಳಿ
- ಹಿಟ್ಟನ್ನು ನಿಂಬೆ ಗಾತ್ರದಲ್ಲಿ ತೆಗೆದು ಬಟ್ಟಲಿನಂತೆ ಹಳ್ಳಮಾಡಿ ಹೂರಣ ತುಂಬಿ ಅದೇ ಹಿಟ್ಟಿನಿಂದ ಮುಚ್ಚಿ ಲಟ್ಟಿಸಿ
- ಕಾದ ಕಾವಲಿಯ ಮೇಲೆ ತುಪ್ಪ ಬಳಸಿ ಸುಡುವುದು
- ಬಿಸಿಬಿಸಿ ಇದ್ದಾಗಲೇ ಹಾಲು ತುಪ್ಪದೊಡನೆ ತಿನ್ನಲು ಕೊಡಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಇದೇನ್ಲಾ ಇದು

೧. ಪಾತಾಳಕ್ಕಿಳಿಯುತ್ತೆ,ಸಿದ್ದನ್ನೆಲ್ಲಾ ಬಾಚತ್ತೆ, ಒಡೆಯನ ಬಳಿಗೆ ಬಂದು ಕಕ್ಕತ್ತೆ

೨. ಅಣ್ಣನಮನೆ ದೀಪದಿಂದ ತಮ್ಮನ ಮನೆಯಲ್ಲಿ ಬೆಳಕು

ಉತ್ತರಕ್ಕೆ ಪುಟ ೧೩ ನೋಡಿ

ಒಸಗೆ ...

ಬದಿಯಲ್ಲಿನ ಬನದಲ್ಲಿದೆ
ಬಗೆ ಬಣ್ಣದ ಮುಗುಳು
ಹಸಿರೆಲೆಗಳ ಮರೆಯಲ್ಲಿದೆ
ಕೋಕಿಲ ಮೆಲು ಕೊರಳು

ಹೊಸ ಚೇತನ ಮನದಲ್ಲಿದೆ
ಇನಿಯನ ನೆನೆದಿರಲು
ಎದೆ ಬೇಡಿಕೆ ಮರುಕಳಿಸಿದೆ
ಮಧು ಮಾಸವು ಬರಲು

ಚೆಲುವಲ್ಲಿದೆ ನಲಿವಲ್ಲಿದೆ
ಒಲಿದವನ ಎದೆಯಲ್ಲಿ
ಚೈತ್ರವು ದಿನ ಕುಣಿದಾಡದೆ
ಅವನಿರೆ ಬಳಿಯಲ್ಲಿ

ಒಲವೊಂದನೆ ಕಾಣುವೆ ನಾ
ಹೊಲವಾಗಿದೆ ಹೃದಯ
ಹಸಿರಾಗಾಲಿ ಉಸಿರಾಗಲಿ
ನನ್ನೊಲವಿನ ಗೆಳೆಯ

ರಚನೆ: ಮಾಲು (ಅಡಿಲೈಡ್)

ಹಾಸ್ಯ ಚಿಲುಮೆ

ತಿಮ್ಮನ ತಂದೆ ಗೊಟಕ್ ಅಂದಿದ್ದ, ಸ್ವಲ್ಪವೂ ಬೇಸರವಿಲ್ಲದೆ ತಿರುಗಾಡುತ್ತಿದ್ದ ಅವನನ್ನು ಕಂಡು ಗುಂಡ"ಅಲ್ಲವೋ ಅಪ್ಪ ಸತ್ತಿದ್ದಾರೆ ಅಂತ ಸ್ವಲ್ಪಾನೂ ಶೋಕಾನೇ ಇಲ್ವಲ್ಲೋ ನಿನಗೆ, ಕಡೇ ಪಕ್ಷ ಪೇಪರ್ನಲ್ಲಿ ಒಂದು ಶ್ರದ್ಧಾಂಜಲೀ ನಾದ್ರೂ ಹಾಕಿಸೋ"ಅಂದ. ಅದಕ್ಕೆ ತಿಮ್ಮ ಪೆಪರ್ ನಲ್ಲಿ ಆಫರ್ ಇತ್ತು ಏಳು ಪದಗಳಿಗೆ ಏಳು ಡಾಲರ್ ಅಂತ.ಕಡೆಗೆ ಯೋಚನೆ ಮಾಡಿ ಒಂದು ಜಾಹಿರಾತು ಕೊಟ್ಟ ಅದು ಹೀಗಿತ್ತು "Dad died Toyota Corolla 1995 for sale" !!!!!

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಜಾಣ ಕರ್ನಾಟಕ

೧. ಕರ್ನಾಟಕದ ಈ ವೀರ ರಾಣಿಯರು ಯಾವ ವಿದೇಶೀಯರ ವಿರುದ್ಧ ಹೋರಾಡಿದರು ತಿಳಿಸಿ.
ಅ. ರಾಣಿ ಅಬ್ಬಕ್ಕ ದೇವಿ.
ಆ. ಕಿತ್ತೂರು ಚೆನ್ನಮ್ಮ

೨. ಕೆಳದಿ ಚೆನ್ನಮ್ಮ, ಬೇರೆ ಯಾವುದೇ ದೊರೆಗಳು ತೋರದ ಧೈರ್ಯ ತೋರಿ, ಖ್ಯಾತ ಹಿಂದೂ ರಾಜನ ಪುತ್ರನೊಬ್ಬನಿಗೆ ಆಶ್ರಯ ನೀಡಿ, ಬಲಶಾಲಿಯಾದ ಮೊಘಲ್ ಸಾಮ್ರಾಟನನ್ನು ಎದುರಿಸಿ ಜಯಶಾಲಿಯಾದಳು.
ಅ. ಆ ರಾಜಪುತ್ರ ಯಾರು?
ಆ. ಆ ಮೊಘಲ್ ಸಾಮ್ರಾಟ ಯಾರು?

ಸರಿ ಉತ್ತರಕ್ಕೆ ಪುಟ ೧೪ ನೋಡಿ

ಇದೇನ್ಲಾ ಇದು – ಉತ್ತರ
೧. ಮೀನಿನ ಬಲೆ
೨. ಸೂರ್ಯ- ಚಂದ್ರ

ಮೊದಲ ಮಹಾ ಯುದ್ಧ -100 ವರ್ಷ

ನಾಗೇಂದ್ರ ಅನಂತಮೂರ್ತಿ

ಏನಪ್ಪಾ ಇದು ಹುಟ್ಟಿದ ಹಬ್ಬದ ಹಾಗೆ ಯುದ್ಧಕ್ಕೂ ಸಂಭ್ರಮವೇ? ಕೆಲವರಿಗಂತೂ ಹೌದಿರಬಹುದು. ಏಕೆಂದರೆ ಇದೂ ಸಹ ಸಾಯುವ ಹಾಗು ಸಾಯಿಸುವ ಹಬ್ಬ. ಹುಟ್ಟಿದ ಹಬ್ಬ ಒಂದು ದಿನವಾದರೆ ಇದಕ್ಕೆ ಮಿತಿಯೇ ಇಲ್ಲ, ಶಕ್ತಿಹೀನರಲ್ಲಿ ಸಾಯಲು ಜನ ಇಲ್ಲದಂತಾಗಬೇಕು ಅಥವಾ ಶಕ್ತಿಶಾಲಿಗಳಿಗೆ ಕೊಂದು ಸಾಕಾಗಬೇಕು. ಅಲ್ಲದೆ ಯುದ್ಧಕ್ಕೆ ಕೊನೆಯೇ ಇರದು.

ಪ್ರಪಂಚದ ಮೊದಲ ಮಹಾಯುದ್ಧ ಪ್ರಾರಂಭವಾದದ್ದು ಇದೇ ಆಗಸ್ಟ್ ತಿಂಗಳ ೪ ರಂದು ಸರಿಯಾಗಿ ೧೦೦ ವರ್ಷಗಳ ಹಿಂದೆ ಅಂದರೆ ೧೯೧೪ರಲ್ಲಿ. ಪ್ರಪಂಚ ಕಂಡ ಮೊದಲ ದೀರ್ಘವಾದ ಘೋರ ಯುದ್ಧ ಯುರೋಪ್ ಕೇಂದ್ರಿತವಾಗಿ ೧೧ ನವೆಂಬರ್ ೧೯೧೮ ರ ವರೆಗೆ ಸಾಗಿತು ಮಾರಣಹೋಮ. ಒಟ್ಟಾರೆ ಸುಮಾರು ೯೦ ಲಕ್ಷ ಯೋಧರ ಆಹುತಿಯನ್ನೂ ತೆಗೆದುಕೊಂಡಿತು.

ರಾಜಕೀಯ, ಗಡಿ ಹಾಗು ಅರ್ಥಿಕ ಬೇಧಗಳು ಯುರೋಪ್ ನ ದೇಶಗಳಲ್ಲಿ ಯುದ್ಧಕ್ಕೆ ನಂದಿ ಹಾಡಿತು. ಪ್ರಮುಖ central powers ಗಳಾದ ಜರ್ಮನಿ, ಆಸ್ಟ್ರಿಯ-ಹಂಗೇರಿ, ಒಟ್ಟೊಮೊನ್ ಸಾಮ್ರಾಜ್ಯ ಹಾಗು ಬಲ್ಗೇರಿಯ ಒಂದೆಡೆ ಹಾಗು Allied Powers ಗಳಾದ ಫ್ರಾನ್ಸ್, ಬ್ರಿಟಿಷ್ ಸಾಮ್ರಾಜ್ಯ (ಅಂದಿನ ಭಾರತ ಆಸ್ಟ್ರೇಲಿಯಾ ದೇಶಗಳನ್ನೊಳಗೊಂಡು) ಮಧ್ಯೆ ನಡೆದ ಯುದ್ಧ ಇದು. ರಶಿಯಾ, ಜಪಾನ್, ಇಟಲಿ, ಅಮೇರಿಕಾ ಹಾಗು ಇತರ ದೇಶಗಳೂ ಸಹ ನಂತರ allied powers ಜೊತೆ ಸೇರಿದವು.

ಪ್ರಪಂಚದ ಬೇರಾವ ಸಮರವೂ ಸಹ ಯುರೋಪ್ ನ ನಕ್ಷೆಯನ್ನು ಈ ಮಟ್ಟಕ್ಕೆ ಬದಲಾಯಿಸಲಿಲ್ಲ. ನಾಲ್ಕು ಪ್ರಮುಖ ಸಾಮ್ರಾಜ್ಯಗಳಾದ ಜರ್ಮನಿ, ರಶಿಯಾ, ಒಟ್ಟೋಮನ್ ಮತ್ತು ಆಸ್ಟ್ರಿಯಾ-ಹಂಗೇರಿ ಕಣ್ಮರೆಯಾದವು. ಲಕ್ಷಾಂತರ ಸಾವು ನೋವು ಮತ್ತು ಒಟ್ಟಾರೆ ಸುಮಾರು ೮೦ ಬಿಲಿಯನ್ ಅಮೆರಿಕನ್ ಡಾಲರ್ ನಷ್ಟದ ನಂತರ ೧೧ ನೇ ತಿಂಗಳು (ನವೆಂಬರ್) ೧೧ನೇ ತಾರೀಖು ೧೧ ಗಂಟೆಗೆ ಆದ ಒಪ್ಪಂದದಂತೆ ಮೊದಲ ಮಹಾ ಯುದ್ಧ ಕೊನೆಗೊಂಡಿತು.

ಇಷ್ಟೆಲ್ಲಾ ಆದರೂ ಪ್ರತಿ ವರ್ಷ ಹುಟ್ಟಿದ ಹಬ್ಬ ಬರುವಂತೆ ಎರಡನೇ ಮಹಾ ಯುದ್ಧ ೧೯೩೯ಕ್ಕೆ ಮರುಕಲಿಸಿತು. ಅಧಿಕಾರ ದಾಹ, ಸ್ವಾರ್ಥ ಇವೆಲ್ಲವೂ ಉತ್ಕೃಷ್ಟವಾದ ಮಾನವ ಜನ್ಮವನ್ನು ವಿನಾಶದ ಹಾದಿ ಹಿಡಿಯುವಂತೆ ಮಾಡಿದೆ. ನಾವು ಚರಿತ್ರೆಯಿಂದ ಪಾಠ ಕಲಿತು ಪರಸ್ಪರ ಶಾಂತಿ ಸಹ ಬಾಳ್ವೆಯಿಂದ ವಿಶ್ವಶಾಂತಿಯೆಡೆಗೆ ಹಾಗು ಮನುಕುಲದ ಒಳಿತಿಗೆ ಹೆಜ್ಜೆ ಇಡಬಾರದೇಕೆ? ▪

ಯುದ್ಧಕ್ಕೆ ಮೊದಲಿದ್ದ ಯುರೋಪ್ ಭೂಪಟ



ಯುದ್ಧದ ನಂತರ ಬದಲಾದ ಯುರೋಪ್ ಭೂಪಟ

ಮಾಹಿತಿ ಮೂಲ: ವಿಕಿಪೀಡಿಯ

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"



ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ಐದು ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ಸ್ವಭಾವಕ್ಕೊಂದು ರೂಪ ಕೊಟ್ಟರೆ ಗಣಿತದ ಒಂದು ಭಾಗ ಸಿಗುವುದೆ?

೨. ನಿದ್ದೆ ಬರುತ್ತಿದೆಯೆಂದು ಬಾಯ್ತೆರೆದರೆ, ಕೊಂಬನ್ನಿಟ್ಟುಕೊಂಡು ಕಾಮಧೇನು ಬಂದಳು.

೩. ಮೇಲಿನ ಊರಲ್ಲ ಈ ಸಿಸ್ತಿನ ನಾಯಕರದು?

೪.ಬಿಲ್ಲಿನ ಸಂಗಾತಿ ಅಡುಗೆಯವನೊಡನೆ ಒಂದಾಗಿದೆ.

೫. ಮಕ್ಕಳೊಡನೆ ಆಟವಾಡಿಕೊ ಎಂದರೆ, ಹೋಗಿ ಹೊಲಗದ್ದೆಗಳ ಕಾವಲಿಗೆ ನಿಂತ.

ಉತ್ತರ

ಅಂಧಕಾರವನ್ನು ನೀಗಿಸಲು, ದಯಾಳುವನ್ನು ಕರೆದರು ಶ್ರೀಕಂಠಯ್ಯನವರು.

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಆಗಸ್ಟ್ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಜುಲೈ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದ ಅನೇಕ ಜನರಿಗೆ ನಮ್ಮ ಧನ್ಯವಾದಗಳು. ಅವರ ಪೈಕಿ ಎಲ್ಲಾ ಸರಿ ಉತ್ತರ ಕಳುಹಿಸಿರುವ ಇವರಿಗೆ ನಮ್ಮ ಅಭಿನಂದನೆಗಳು.

- ಸುಮ ಅಶೋಕ್, ಸಿಡ್ನಿ
- ಬಿ.ಆರ್. ವತ್ಸಲ ದ್ವಾರಕನಾಥ್ , ಕೆ.ಜಿ.ಎಫ್
- ರಾಘವೇಂದ್ರ ಮೂರ್ತಿ, ಬೆಂಗಳೂರು
- ಚಂದ್ರಿಕಾ ಉದಯ್, ಸಿಡ್ನಿ
- ನಳಿನ ವೆಂಕಟನಾಗ್, ಮೆಲ್ಬೋರ್ನ್
- ಶ್ರೀಲಕ್ಷ್ಮಿ ಗಾಯತ್ರಿ ಪ್ರಕಾಶ್, ಬೆಂಗಳೂರು
- ವಿಜಯಶ್ರೀ ರಾಮಕೃಷ್ಣ, ಕ್ಯಾಲಿಫೋರ್ನಿಯ
- ಶ್ರೀಧರ್ ಬಾಣಸಂದ್ರ, ಕ್ಯಾನ್ಬೆರ



NRI SEVA
Educational, Legal, financial, Health, Reality management services Liaison work, Tours & Travels
visit www.nriseva.in or contact
Singapore – Harish +6598691760
Canada – SowmyaKeshava – 00968-99226928
Australia – Nagendra A- 0061401193852
Contact Mr. Nagendra EMAIL 0401193852

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪



ಶ್ರೀಚಕ್ರ 9 - 3 ರಚನೆ: ನಾಗಶ್ರೀ ಹರ್ಷ

e-ಮದುವೆ

ಸ್ಮಿತಾ ಮೇಲ್ಕೋಟೆ

'ಏಯ್ ರಾಮು, ಕಂಪ್ಯೂಟರ್ ಕೊಡೋ. ಚೂರು ಫೇಸ್ ಬುಕ್ ನೋಡ್ಬೇಕು,

"ಅಜ್ಜಿ ... ಆ! ಏನಂದೆ ಫೇಸ್ಬುಕ್ ಆ! ನಿನಗ್ಯಾಕೆ ಬೇಕು ಫೇಸ್ ಬುಕ್ ಉಸಾಬರಿ ಈ ವಯಸ್ಸಲ್ಲಿ... ಸುಮ್ಮನೆ ರಾಮಾ ... ಕೃಷ್ಣಾ ಅಂತ ಇರಬಾರದ ?"

ರಾಮು ನನಗೂ ಅದೇಪಾ ಇಷ್ಟ. ಆದರೆ ಏನು ಮಾಡುವುದು, ನನ್ನ ಮೊಮ್ಮಗ ಕೃಷ್ಣನ ಮದುವೆ ಅಂತೆ. ಹಿಂದಿನ ಕಾಲದ ರೀತಿ ಮನೆ ಮನೆಗೆ ಬಂದು ಮದುವೆ ಆಮಂತ್ರಣ ಕೊಡಲ್ಲವಲ್ಲ ಈಗ. ಎಲ್ಲಾ ಕಂಪ್ಯೂಟರ್ ನಲ್ಲೇ ಕರೆಯೋದು.

ಅಜ್ಜಿ... ಯಾರ ಜೊತೆ ಮದುವೆ ? ಯಾವಾಗ ? ಎಲ್ಲಿ ? ಯಾವತ್ತು ?

ಅದಕ್ಕೆ ಕಣೋ ನಾನು ಕಂಪ್ಯೂಟರ್ ಕೇಳ್ತಾ ಇರೋದು.. ಅದೇನೋ ಲಗ್ನ ಪತ್ರಿಕೆಯನ್ನು ಫೇಸ್ಬುಕ್ ನಲ್ಲಿ ಅಂಟಿಸಿದ್ದಾರಂತೆ... ಅದನ್ನು ನೋಡಿಕೊಂಡು ಮದುವೆಗೆ ಹೋಗಬೇಕು.

ಅಜ್ಜಿ! ನಿಂದೂ ಫೇಸ್ ಬುಕ್ ಅಕೌಂಟ್ ಇದೆಯಾ?

ಎಲ್ಲರಿಗೂ ಫೇಸ್ ಅಂತ ಇಲ್ವೇನೋ ಮಾರಾಯ. ಹಂಗೆ ಅದಕ್ಕೂ ಒಂದು ಅಕೌಂಟ್ ಓಪನ್ ಮಾಡಿಬಿಟ್ಟೆ... ಯಾತಕ್ಕೂ ಇರಲಿ ಅಂತ. ಬ್ಯಾಂಕ್ ಅಕೌಂಟ್ನಲ್ಲಿ ಹಣ ಜಮಾ ಮಾಡುವುದು- ತೆಗೆಯುವ ತರಹ, ಇಲ್ಲಿ ಪೋಸ್ಟ್ ಜಮಾ ಮಾಡುವುದು, ಲೈಕ್ಗಳ ಪಟ್ಟಿ ತೆಗೆಯುವುದು, ನೋಡುವುದು. ಇದೇ ಕಣಪ್ಪ ದಿನ ಬೆಳಗಾದರೆ ಅದರ ಹಣೆಬರಹ...

ಏನಜ್ಜಿ, ನನಗೇ ಫೇಸ್ ಬುಕ್ ಮಾರಾಟ ಮಾಡ್ತಾ ಇದ್ದೀಯ. ಒಳ್ಳೆ ಅಜ್ಜಿ, ಬ್ಯಾಂಕ್ ಅಕೌಂಟ್ ಇಲ್ಲದಿದ್ದರೂ ಪರವಾಗಿಲ್ಲ, ಫೇಸ್ ಬುಕ್ ಅಕೌಂಟ್ ಇರಬೇಕು ಅನ್ನೋದೇ ನಿಮ್ಮ ಥಿಯರಿನಾ. ಸರಿ ತಗೊಳ್ಳಿ ಪರವಾಗಿಲ್ಲ... ಕಾಲ ಬದಲಾಗಿ ಹೋಯ್ತು..

ನೋಡೋ ರಾಮು, ಮದುವೆ ಅಮೇರಿಕಾ ಹತ್ತಿರದ ಯಾವುದೊ ಐಲ್ಯಾಂಡ್ ನಲ್ಲಂತೆ... ಅಬ್ಬ ನನಗೂ ಈ ಜನ್ಮದಲ್ಲಿ ವಿಮಾನ ಭಾಗ್ಯ ಬಂತು ನೋಡು. ಇನ್ನು ಟಿಕೆಟ್ ಬರೋದೊಂದೇ ಬಾಕಿ. ಬೇಗ ವೀಸಾ ಅಪ್ಲೈ ಮಾಡ್ಬೇಕು.

ಏನಜ್ಜಿ, ಆ ಕಾಲದಲ್ಲಿ ಮದುವೆಗೆ ಬಸ್ ಮಾಡಿದಂಗೆ ಈಗ ಊರ ಜನವೆಲ್ಲಾ ಹೋಗಕ್ಕೆ ವಿಮಾನ ಬುಕ್ ಮಾಡ್ತಾರೇನೋ!

ಏನಾರು ಮಾಡ್ಲಿ... ಮಲೇಷಿಯನ್ ಏರ್ಲೈನ್ಸ್ ಬುಕ್ ಮಾಡದಿದ್ದರೆ ಸರಿ,

ಅಜ್ಜಿ ಪರವಾಗಿಲ್ಲ, ಎಲ್ಲ ಟಿವಿ ನ್ಯೂಸ್ ಫಾಲೋ ಮಾಡಿದ್ದೀಯಾ. ಅದು ಸರಿ ಹುಡುಗಿ ಮನೆಯವರು ಎಲ್ಲಿಯವರು ? ಐಲ್ಯಾಂಡ್ ನಲ್ಲಿ ಮದುವೆ ಮಾಡ್ತಿದ್ದಾರಲ್ಲ... ಭಾರಿ ಕುಳಾನೆ ಇರಬೇಕು. ಅಜ್ಜಿ ... ಹಾಗಾರೆ ನೀವು ಮದುವೆಗೆ ದೊಡ್ಡ ಗಿಫ್ಟೇ ಹಿಡ್ಕೊಂಡು ಹೋಗಬೇಕು.

ರಾಮು, ವಿಮಾನದಲ್ಲಿ ಎಷ್ಟು ಕೆಜಿ ಬಿಡ್ತಾರೋ ಏನೋ.. ದೊಡ್ಡದೋ ಚಿಕ್ಕದೋ ಗಿಫ್ಟ್, ಆಮೇಲೆ ಯೋಚನೆ ಮಾಡ್ತೀನಿ. ನಾನು ಮೊದಲು ದೊಡ್ಡ ಸೂಟ್ಕೇಸ್ ಕೊಂಡುಕೊಳ್ಳಬೇಕು, ವೀಸಾ ರೆಡಿ ಮಾಡ್ಕೊಬೇಕು. ಒಳ್ಳೆ ರೇಷ್ಮೆ ಸೀರೆ ಬೇಕು. ಅಲ್ಲಿ ಚಳಿನೋ ಏನೋ ಬಟ್ಟೆಬರೆ ಶಾಪಿಂಗ್ ಮಾಡ್ಬೇಕು.

ಅಜ್ಜಿ ... ನೀನು ಮದುವೆಗೆ ಹೋಗ್ತಾ ಇದ್ದೀಯೋ ಅಥವಾ migrate ಆಗ್ತಾ ಇದ್ದೀಯೋ.

ಅಜ್ಜಿ... ನೋಡು ಬಾ ಇನ್ವಿಟೇಶನ್ ಡೌನ್ಲೋಡ್ ಆಗಿದೆ.

ನೀನೆ ಓದಪ್ಪ... ಚಿಕ್ಕ ಅಕ್ಷರ ಕಾಣೋಲ್ಲ ಸರಿಯಾಗಿ.

"ಕೃಷ್ಣ ಮತ್ತು ರಾಧೆಯ ಮದುವೆಗೆ ನೀವುಗಳೆಲ್ಲಾ ಸಕುಟುಂಬ ಸಮೇತ, ಬಂಧು ಬಳಗದ ಜೊತೆಗೆ, ಮನೆಯಲ್ಲಿ ಅಥವಾ ಹೋಟೆಲ್ನಲ್ಲಿ ಸಿಹಿ ಊಟ ಮಾಡಿ, ಎಲೆ ಅಡಿಕೆ ಹಾಕಿಕೊಂಡು, IST ರಾತ್ರಿ ೧೦ ಗಂಟೆ ಸಮಯಕ್ಕೆ ಇಂಟರ್ನೆಟ್ ಮುಂದೆ ಕುಳಿತು ಕೊಳ್ಳಿ. ಮದುವೆಯ ನೇರ ಪ್ರಸಾರವನ್ನು ವೀಕ್ಷಿಸಬೇಕಾಗಿ ವಿನಂತಿ. ನಂತರ ಫೇಸ್ ಬುಕ್ ನಲ್ಲಿ ಅಪ್ಲೋಡ್ ಮಾಡಿದ ಫೋಟೋಸ್ ಕೆಳಗೆ ಮದುಮಕ್ಕಳಿಗೆ ನಿಮ್ಮ ಆಶಿರ್ವಾದದ ಲೈಕ್ ಮತ್ತು ಕಾಮೆಂಟ್ ಉಡುಗೊರೆಯನ್ನು ಹಾಕಿರಿ"

ಅಯ್ಯೋ ಹಾಗಾದರೆ ಇದು ಆ ಮದುವೆಯಲ್ಲ, ಇದು "e-ಮದುವೆ!!!" ▪

ಜಾಣ ಕರ್ನಾಟಕ – ಉತ್ತರ

೧. ಅ. ಪೋರ್ಚುಗೀಸರು ಆ.ಬ್ರಿಟೀಷರು

೨. ಅ. ಛತ್ರಪತಿ ಶಿವಾಜಿಯ ಮಗ ರಾಜಾರಾಮ. ಆ. ಔರಂಗಜೇಬ್

ವಿಜ್ಞಾನ

ಮನೆಯ ಒಳಗೆ ಮಳೆ !

ಸಂಕಲನ: ಬದರಿ ತ್ಯಾಮಗೊಂಡ್ಲು

ನಿಸರ್ಗದಲ್ಲಿ ಬೀಳುವ ಮಳೆಯು ಹೇಗೆ ಉಂಟಾಗುತ್ತದೆ ಎಂದು ಈ ಸರಳ ಪ್ರಯೋಗದಿಂದ ತಿಳಿಯೋಣ!

ಬೇಕಾಗುವ ಸಾಮಗ್ರಿ:

ಒಂದು ಗಾಜಿನ ಲೋಟ/ಬಾಟಲಿ

ಒಂದು ಪ್ಲಾಸ್ಟಿಕ್ ಪ್ಲೇಟ್

ಕುದಿಯುವ ನೀರು (ಕಾಲು ಲೋಟ)

ಮಂಜುಗಡ್ಡೆ - 10 (ICE-CUBES)

ವಿಧಾನ:

ಲೋಟದ ಕಾಲುಭಾಗದಷ್ಟು ಬಿಸಿನೀರನ್ನು ತುಂಬಿ ಮುಚ್ಚಳವಾಗಿ ಪ್ಲೇಟ್ ಒಂದನ್ನು ಮುಚ್ಚಿ.

ಒಂದು ನಿಮಿಷ ಹಾಗೆ ಬಿಟ್ಟು, ನಂತರ ಪ್ಲೇಟ್ ಮೇಲೆ ಮಂಜುಗಡ್ಡೆಗಳನ್ನು ಇಟ್ಟು ಏನಾಗುವುದೆಂದು ವೀಕ್ಷಿಸಿ.

ಒಂದಷ್ಟು ನಿಮಿಷಗಳಾದ ಮೇಲೆ ಮಳೆ ಹನಿಗಳಂತೆ ಲೋಟದ ಒಳಭಾಗದಲ್ಲಿ ನೀರಿನ ಬಿಂದುಗಳು ಇಳಿಯಲಾರಂಭಿಸುತ್ತದೆ.

ಏನಾಗುತ್ತಿದೆ:

ಲೋಟದೊಳಗಿನ ಉಷ್ಣ ನೀರಿನಿಂದ ಗಾಳಿಯು ಬೆಚ್ಚಗಾಗಿ ಪ್ಲೇಟ್ ಹತ್ತಿರ ಹೋಗುತ್ತದೆ. ಪ್ಲೇಟ್ ಮೇಲಿರುವ ಮಂಜುಗಡ್ಡೆಯು ಲೋಟದೊಳಗಿನ ಬೆಚ್ಚಗಿನ ಗಾಳಿಯಲ್ಲಿನ ತೇವಾಂಶವನ್ನು ಹೆಚ್ಚು ಸಾಂದ್ರವಾಗುವಂತೆ ಮಾಡಿ ನೀರಿನ ಹನಿಗಳಾಗಿ ಮಾಡಿ ಕೆಳಗೆ ಇಳಿಯುವಂತೆ ಮಾಡುತ್ತದೆ. ಮಳೆ ಬರುವುದೂ ಹೀಗೆಯೇ. ವಾತಾವರಣದಲ್ಲಿನ ಉಷ್ಣ ಮತ್ತು ತೇವಾಂಶದ ಗಾಳಿಯು ಗಗನದಲ್ಲಿನ ಶೀತ ಗಾಳಿಯೊಡನೆ ಬೆರೆತು ನೀರಿನ ಹನಿಯಾಗಿ ಮಳೆಯಾಗಿ ಕೆಳಗೆ ಬೀಳುತ್ತದೆ. ▪

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಪ್ರಕಾಶ್ ರೈ ಅಭಿನಯದ ಮತ್ತು ಇಳಯರಾಜ ಅತ್ಯುತ್ತಮ ಸಂಗೀತ

ನಿರ್ದೇಶನದ **"ಒಗ್ಗರಣೆ" ಕನ್ನಡ ಚಲನಚಿತ್ರ**

Liverpool EVENTS ಚಿತ್ರಮಂದಿರದಲ್ಲಿ ಪ್ರದರ್ಶನಕ್ಕೆ.

Saturday 09th and 10th Sunday, August 2014 @ 03:00pm
Adults $15, child $10, Under 5yr free.
Text msg for bookings
Narayana - 0423634979
Nagabhushan - 0433763911

ಸುಗಮ ಗಾನ ಸಮಾಜ ಸಾದರಪಡಿಸುತ್ತಿದೆ **ಕನ್ನಡ ಕ್ಯಾರಯೋಕೆ ಸಂಜೆ**

ಗಾನ ಸಮಾಜದ ಎಲ್ಲಾ ಸದಸ್ಯರಿಗೂ ಹಾಡಲು ಮುಕ್ತ ಅವಕಾಶ

ಅಂದು ವೇದಿಕೆಯಲ್ಲಿ ಹಲವಾರು ಹೊಸ ಪ್ರತಿಭೆಗಳ ಪರಿಚಯ ಮಾಡಲಾಗುವುದು.
(More information will be announced later)

ಸ್ಥಳ: WattleGrove Public School, Cressbrook Drive, NSW 2173
ಸಮಯ: **05:30pm,** ದಿನ **: 27th Sep 2014**
Contact: sugamakannada@yahoo.com.au

ಕಿಚ್ಚ ಸುದೀಪ್ ಮತ್ತು ಕ್ರೇಜಿ ಸ್ಟಾರ್ ರವಿಚಂದ್ರನ್ ಅಭಿನಯದ

ಅದ್ದೂರಿ ಬಜೆಟ್ ಸಿನಿಮಾ

"ಮಾಣಿಕ್ಯ"

Liverpool EVENTS ಚಿತ್ರಮಂದಿರದಲ್ಲಿ ಪ್ರದರ್ಶನಕ್ಕೆ.

Sunday 31st August 2014 @ 03:00 pm Adults $15, child $10, Under 5yr free.
Booking starts from 10th August 2014
Narayana - 0423634979
Nagabhushan - 0433763911

ನಮ್ಮ
ಸುತ್ತಾ
ಮುತ್ತಾ

United Indian associations Inc presents

India Australia Friendship Fair 2014

17th Aug 10am-7:30pm

Entry $5, Parking is free

Blacktown International sportspark
Athletic centre, Eastern road, Rooty Hill NSW 2766

For more details at - www.uia.org.au

ಈ ಸಂಚಿಕೆ ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.